
ನವಸಾಕ್ಷರ ಪುಸ್ತಕ ಮಾಲೆ ೬೪

ಸಿರಿಕತೆ

ಗಾಯತ್ರಿ ನಾವಡ



ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

ಹಾ. ಮಾ. ನಾಯಕ
ಎಚ್. ನರಸಿಂಹಯ್ಯ
ಜಿ. ನಾರಾಯಣ
ಎಲ್. ಎಸ್. ಶೇಷಗಿರಿರಾವ್
ಶಾಂತರಸ
ಕೆ. ವಿ. ಸುಬ್ಬಣ್ಣ
ಗೊ. ರು. ಚನ್ನಬಸಪ್ಪ
ಪಿ. ಎಸ್. ಶಂಕರ್
ಶಿವಶಂಕರ ಹಿರೇಮಠ
ಆರ್. ಎಸ್. ರಾಜಾರಾಮ್
ಶ್ರೀಮತಿ ಎಲ್. ಜಿ. ಸುಮಿತ್ರ

ಸಂಪಾದಕ ಸಮಿತಿ

ಶ್ರೀಯುತರಾದ
ಎಸ್. ಜಿ. ನಾಗಲೋಟಿಮಠ
ಕೆ. ವಿ. ನಾರಾಯಣ
ಪುರುಷೋತ್ತಮ ಬಿಳಿಮಲೆ
ಕರೀಗೌಡ ಬೀಚನಹಳ್ಳಿ
ಅಮೃತ ಸೋಮೇಶ್ವರ
ಸಿ. ಆರ್. ಚಂದ್ರಶೇಖರ್
ಬಿ. ಎ. ಶ್ರೀಧರ
ಲಿಂಗದೇವರು ಹಳೆಮನೆ
ಭ. ಮಲ್ಲಿಕಾರ್ಜುನ
ಮಹಾಬಲೇಶ್ವರರಾವ್
ಭಕ್ತಪ್ರಿಯ
ಎಂ. ಪಿ. ಪರಮಶೇಖರಯ್ಯ
ಶ್ರೀಮತಿ ಉಷಾ ರಾಂಕುಮಾರ್

ಲೋಕಶಿಕ್ಷಣ ನಿರ್ದೇಶನಾಲಯ
ನವಸಾಕ್ಷರ ಪುಸ್ತಕ ಮಾಲೆ—೬೪

ಸಿರಿ ಕತೆ

ಗಾಯತ್ರಿ ನಾವಡ

ಪ್ರಸಾರಾಂಗ
ಕನ್ನಡ ವಿಶ್ವವಿದ್ಯಾಲಯ
ಹಂಪಿ—೫೮೩ ೨೧೧

SIRI KATHE : By Gayathri Navada. Published by The Director of Prasaranga, Kannada University, Hampi – 583 211, KARNATAKA.
First Impression 1994, Pp. ii + 26, Rs. 8.00

ಸಂಯೋಜನಾಧಿಕಾರಿ
ಎಚ್.ಎಸ್.ಶ್ರೀಮತಿ
ಪಠ್ಯಪುಸ್ತಕ ರಚನಾ ವಿಭಾಗ

ಪ್ರಕಾಶಕರು
ನಿರ್ದೇಶಕರು
ಪ್ರಸಾರಾಂಗ
ಕನ್ನಡ ವಿಶ್ವವಿದ್ಯಾಲಯ
ಹಂಪಿ—೫೮೩ ೨೧೧

ಮುಖಪುಟ ವಿನ್ಯಾಸ
ಕೆ. ಮಹಾಳಿ

ಬೆಲೆ: ರೂ ೮.೦೦

ಮುದ್ರಕರು
ಅಭಿಮಾನಿ ಪ್ರಕಾಶನ
೯೬, ಡಾ.ರಾಜಕುಮಾರ್ ರಸ್ತೆ,
ರಾಜಾಜಿನಗರ,
ಬೆಂಗಳೂರು—೫೬೦ ೦೨೧

ಸಿರಿ ಕತೆ

ಸಂಜೆಯ ಕತ್ತಲಾಯಿತು. ಚಂದಿರ ಮೂಡಿ ಬಂದ. ಊರು ಕೇರಿಗೆ ಬೆಳದಿಂಗಳು ತಂದ. ಕಾಜಾರ ಗುತ್ತು ರಾಮಣ್ಣ ಶೆಟ್ಟರ ಮನೆ. ಊಟದ ಮನೆಯಲ್ಲಿ ಮಕ್ಕಳ ಗದ್ದಲ. ಆರು ಮತ್ತು ಎಂಟು ವರ್ಷದ ಇಬ್ಬರು ಮಕ್ಕಳು ಏನೋ ಜಗಳವಾಡುತ್ತಿದ್ದರು. ತಾಯಿ ಗದರಿಸಿದಳು. ಮಕ್ಕಳು ಜೋರಾಗಿ ಅಳಲು ತೊಡಗಿದರು. ಎಂಕಜ್ಜಿ ಚಾವಡಿಯಲ್ಲಿ ಕುಳಿತಿದ್ದಳು.

''ಏನಾಯಿತು ಮಗಾ? ಯಾಕೆ ಅಳುತ್ತೀರಿ? ಬೇಗ ಊಟ ಮಾಡಿ ಬನ್ನಿ ಇವತ್ತು ನಿಮಗೆ ಒಂದು ಒಳ್ಳೆಯ ಕತೆ ಹೇಳುತ್ತೇನೆ.''

''ಕತೆ'' ಶಬ್ದ ಕೇಳಿದೊಡನೆ ಮಕ್ಕಳು ಅಳು ನಿಲ್ಲಿಸಿದರು. ಜಗಳ ಮರೆತರು. ಅವಸರದಿಂದ ಉಂಡು ಹೊರಗೆ ಓಡಿ ಬಂದರು. ಅಜ್ಜಿಯ ಬಳಿ ಕುಳಿತರು.

'ಅಜ್ಜಿ ಅಜ್ಜಿ ಕತೆ ಹೇಳಿ ಅಜ್ಜಿ, ಕತೆ ಹೇಳಿ...''

''ಯಾವ ಕತೆ ಹೇಳಲಿ ಮಗೂ?''

‘‘ಇಂದು ಹೊಸ ಕತೆ ಹೇಳಿ ಅಜ್ಜಿ’’

‘‘ಸರಿ, ನಾಳೆ ಹುಣ್ಣಿಮೆ. ಹಿರಿಯಡಕದಲ್ಲಿ ಸಿರಿ ಜಾತ್ರೆ’’

‘‘ಅಜ್ಜಿ, ಸಿರಿ ಅಂದರೆ ಯಾರು ಅಜ್ಜಿ?’’

‘‘ಸಿರಿ ಬಂಟರ ಕುಲದ ಮೂಲ ಹೆಣ್ಣು. ದೇವರ ಮಗಳು. ಕಷ್ಟದ ಬದುಕು ಬದುಕಿದವಳು. ಮಾಯವಾಗಿ ದೈವವಾದವಳು. ಸಿರಿ ಪಾಡ್ದನ(ಹಾಡು)ದಲ್ಲಿ ಆ ಕಥೆ ಇದೆ. ಸಿರಿಜಾತ್ರೆಯಲ್ಲಿ ಆ ಪಾಡ್ದನ ಹಾಡುತ್ತಾರೆ. ಅದೊಂದು ದೊಡ್ಡ ಕತೆ. ಮೂರು ತಲೆಮಾರಿನ ಕತೆ ಅದು.

‘‘ಹಾಗಾದರೆ ಆ ಸಿರಿ ಕತೆಯನ್ನೇ ಹೇಳಿ ಅಜ್ಜಿ’’

‘‘ಆಗಲಿ. ಅದನ್ನೇ ಹೇಳುತ್ತೇನೆ. ನೀವು ‘ಹೂಂ’ ಗುಟ್ಟಬೇಕು.

‘‘ಆಗಲಿ ಅಜ್ಜಿ...’’

ಎಂಕಜ್ಜಿ ಕಾಲು ಚಾಚಿ ಗೋಡೆಗೆ ಒರಗಿ ಕುಳಿತಳು. ಅಲ್ಲೆ ಹಾಸಿದ ಚಾಪೆಯಲ್ಲಿ ಮಕ್ಕಳು ಮಲಗಿ ಆಲಿಸಿದರು. ಅಜ್ಜಿ ಕತೆ ಹೇಳಲು ತೊಡಗಿದಳು.

ಅಂದಚಂದದ ತುಳುನಾಡು. ಅಲ್ಲಿ ಸತ್ಯನಾಪುರದ ಅರಮನೆ. ಅಲ್ಲಿನ ಅರಸ ಬಿರುಮ ಆಳ್ವ. ಬಸರೂರಿನ ರಾಣಿ ಸೋಮಕ್ಕದೇವಿ ಅವನ ಹೆಂಡತಿ: ರಾಣಿ ಸೋಮಕ್ಕ ಗುಣ, ರೂಪದಲ್ಲಿ ಬಹಳ ಚೆಲುವೆ. ಗಂಡ ಹೆಂಡಿರು ಒಂದಾಗಿ ಚೆಂದಾಗಿ ಇದ್ದರು.

ಹೀಗೆ ಇರುವಾಗ ಸೋಮಕ್ಕ ಬಸುರಿ ಆದಳು. ಅರಮನೆ ಆನಂದದ

ಆಗರವಾಯಿತು. ಬಸುರಿಗೆ ಬಯಕೆ ಮೊದಲಾಯಿತು. ಅರಸಿಯ ಬಯಕೆಯನ್ನು ಅರಸ ಅರಿತು ತೀರಿಸಿದ. ಅದ್ದೂರಿಯಾಗಿ ಸೀಮಂತ ನಡೆಸಿದ. ಬಗೆಬಗೆಯ ತಿಂಡಿ ತಿನಿಸು ಬಡಿಸಿ ಸಮ್ಮಾನ ಮಾಡಿದ. ಬಸುರಿ ಸಂತಸದಿಂದ ನಲಿದಳು.

ಹೆರಿಗೆಯ ದಿನ ಬಂತು. ಬೇನೆ ಕಾಣಿಸಿತು. ರಾಣಿ ಸೋಮಕ್ಕ ಗಂಡು ಮಗುವನ್ನು ಹೆತ್ತಳು. ಆದರೆ ಹುಟ್ಟಿದ ಮಗು ಮರುಗಳಿಗೆಯಲ್ಲೆ ಸತ್ತಿತು. ಬಾಣಂತಿ ಸೋಮಕ್ಕನೂ ಸತ್ತಳು. ಅರಮನೆಯ ಭಾಗ್ಯ ಅಳಿಯಿತು. ಬಿರುಮ ಆಳ್ವ ಮಮ್ಮಲ ಮರುಗಿದ. ಅರಸಿ ಇಲ್ಲದ ಅರಮನೆ ಮಸಣವಾಯಿತು.

ಬಿರುಮ ಆಳ್ವನಿಗೆ ಮುಪ್ಪು ಬಂತು. ಮುತ್ತಿದ ನೋವಿನಿಂದ ಮತ್ತಷ್ಟು ಸೊರಗಿದ. ಎಲ್ಲ ಸುಖ ಸಂಪತ್ತು ಇದ್ದರೂ ವಂಶದ ಕುಡಿ ಇಲ್ಲ. ಸತ್ಯನಾಪುರದ ಅರಮನೆ ಬೆಳಗುವ ದಾತಾರ ಇಲ್ಲ ಎನ್ನುವ ದುಃಖ ಹೆಚ್ಚಿತು.

ಒಂದು ದಿನ ಬೆಳಗ್ಗೆ ಆಳ್ವ ಎದ್ದ. ಸ್ನಾನ ಮುಗಿಸಿದ. ಪೂಜೆ ಮಾಡಿದ. ಬಣ್ಣದ ಚಾವಡಿಗೆ ಬಂದ. ಪಟ್ಟಮಂಚದಲ್ಲಿ ಕುಳಿತ. ಅರಮನೆಯ ಹೆಣ್ಣಾಳು ದಾರುವನ್ನು ಕರೆದ. ದಾರು ಬಂದಳು. ಆಳ್ವನ ಎದುರು ತಲೆಬಾಗಿ ನಿಂತಳು.

''ದಾರು, ಇನ್ನು ಹೆಚ್ಚು ದಿನ ನಾನು ಬದುಕಲಾರೆ. ಪಟ್ಟದ ಮಂಚ ಬಿಟ್ಟೆ. ಚಿನ್ನದ ಹಾಸು ಬಿಟ್ಟೆ. ಮಣ್ಣ ಹಾಸಲ್ಲಿ ಮಲಗುವೆ. ನಮ್ಮ ಅರಮನೆ ದಾನ ಧರ್ಮಕ್ಕೆ ಹೆಸರುವಾಸಿ. ಅದಕ್ಕೆ ಕುಂದು ಬಾರದಂತೆ ನೋಡಿಕೋ, ಅರಮನೆಯ ದೀಪ ಕೆಡದಂತೆ ಉರಿಸು. ನನಗೆ ಇನ್ನು ಮರಣ'' ಎಂದ. ಎದ್ದು ಏಳು ಬಾಗಿಲ ಒಳಗೆ ನಡೆದ. ಮನೆ ದೇವರ ಗುಡಿ ಸೇರಿದ. ಕುಲದೈವ ಬ್ರಹ್ಮನನ್ನು ಭಕ್ತಿಯಿಂದ ನೆನೆದ. ಮಣ್ಣಿಗೆ ಮುಖ ಮಾಡಿ ಮಲಗಿದ. ದಾರುಗೆ ಏನೂ ತೋಚಲಿಲ್ಲ. ಹಾಗೇ ಕುಳಿತಳು. ಇಂಪಾದ ಹಾಡು ಕೇಳಿ ಎದ್ದು ನಿಂತಳು. ಮುಂಬಾಗಿಲಿಗೆ ಬಂದಳು. ಬ್ರಾಹ್ಮಣ ಭಿಕ್ಷುಕ ನಿಂತಿದ್ದ. ದಾರು ತಲೆಬಾಗಿ ನಮಿಸಿದಳು. ಹರಿವಾಣದಲ್ಲಿ ಭಿಕ್ಷೆ ನೀಡಿದಳು. ''ಹೆಣ್ಣು ನೀಡಿದ ಭಿಕ್ಷೆ ಒಲ್ಲೆ, ಮನೆಯ ಯಜಮಾನ ಭಿಕ್ಷೆ ನೀಡಬೇಕು'' ಎಂದನು ಬ್ರಾಹ್ಮಣ. ಯಜಮಾನ ಆಳ್ವ ಹೊರಬರಲಾರರು ಎಂದು ದಾರು ಹೇಳಿದಳು. ದರ್ಭೆಯಿಂದ ಈ ಗಿಂಡಿಯ

ತೀರ್ಥವನ್ನು ಅವನ ಮೈಗೆ ಸಿಂಪಡಿಸು ಏಳುತ್ತಾನೆ ಎಂದ. ದಾರು ಹಾಗೆ ಮಾಡಿದಳು. ಅಜ್ಜ ಎದ್ದು ಕುಳಿತನು. ನಿಂತು ನಡೆದನು. ಚಾವಡಿಗೆ ಬಂದನು.

ಬ್ರಾಹ್ಮಣನಿಗೆ ಆಳ್ವ ನಮಸ್ಕಾರ ಮಾಡಿದ. ಆದರದಿಂದ ಚಾವಡಿಗೆ ಕರೆದ. ಕರೆತಂದು ಉಪಚರಿಸಿದ. ಬ್ರಾಹ್ಮಣ ಆಳ್ವನನ್ನು ದಿಟ್ಟಿಸಿ ನೋಡಿದ. ''ಆಳ್ವನೆ ನಿನ್ನ ಮುಖ ಬಾಡಿದೆ. ಚಿಂತೆ ಮೂಡಿದೆ. ಏನು ಕಾರಣ?'' ಕೇಳಿದ. ಆಳ್ವ ತನ್ನ ನೋವಿನ ಕತೆಯನ್ನು ಹೇಳಿದ.

''ಲಂಕೆ ಲೋಕನಾಡಿನ ನಿನ್ನ ಮೂಲಸ್ಥಾನವನ್ನು ನೀನು ಮರೆತಿರುವೆ. ಕುಲ ದೈವ ಬ್ರಹ್ಮನ ಗುಡಿ ಹಾಳು ಬಿದ್ದಿದೆ. ಇದೇ ನಿನ್ನ ಸಂತತಿಗೆ ಕೇಡಾಯಿತು. ಅದನ್ನು ಮತ್ತೆ ಕಟ್ಟಿಸು. ದೈವದೇವರನ್ನು ನೆಲೆ ಮಾಡು. ಪೂಜೆ ಜಾತ್ರೆ ಮಾಡಿಸು'' ಎಂದು ಹೇಳಿ ಬ್ರಾಹ್ಮಣ ಮಾಯವಾದನು.

ಆಳ್ವನಿಗೆ ಆನಂದದಿಂದ ಕಣ್ಣೀರು ತುಂಬಿ ಬಂತು. ಮೈಗೆ, ಮನಸ್ಸಿಗೆ ಹೊಸ ಶಕ್ತಿ ಬಂತು. ಕುಲದೈವ ಬ್ರಹ್ಮನನ್ನು ನೆನೆದ. ಹುರುಪಿನಿಂದ ಗುಡಿಕಟ್ಟಲು ಶುರು ಮಾಡಿದ. ಗುಡಿಕಟ್ಟಿ ಮುಗಿಸಿದ. ಹೋಮ ನೇಮ ನಡೆಸಿದ. ಸುಗ್ಗಿ ಹುಣ್ಣಿಮೆ ದಿನಕ್ಕೆ ಜಾತ್ರೆ ನಿಶ್ಚಯಿಸಿದ.

ಸುಗ್ಗಿ ಹುಣ್ಣಿಮೆ ಬಂತು. ಸಂಜೆ ಕಳೆಯಿತು. ಸುತ್ತಮುತ್ತಲಿನ ಊರಿನಿಂದ ಜನ ಲೋಕನಾಡಿಗೆ ಬಂದರು. ಬ್ರಹ್ಮರ ಗುಡಿಯಲ್ಲಿ ನೆರೆದರು. ಡೋಲು, ನಗಾರಿ, ಚಂಡೆ ವಾದ್ಯ, ಕೊಂಬು ಕಹಳೆ ಮೊಳಗಿದವು. ಬಲಿಪೂಜೆ ನಡೆಯಿತು. ದೈವದ ಪಾತ್ರಿಗೆ ಆವೇಶ ಬಂತು. ದೈವ ಮೈದುಂಬಿತು. ಆಳ್ವನನ್ನು ಹರಸಿತು. ಅಭಯ ನೀಡಿ ಹರಸಿತು.

ಪೂಜಾರಿ ಬ್ರಹ್ಮನ ಪೂಜೆ ಮಾಡಿದನು. ಆಳ್ವನಿಗೆ ಗಂಧ ಸಿಂಗಾರದ ಹೂ ಪ್ರಸಾದ ಕೊಟ್ಟನು. ಆಳ್ವ ಬಣ್ಣದ ಹಚ್ಚಡದಲ್ಲಿ ಅದನ್ನು ಹಿಡಿದನು. ಅರಮನೆಗೆ ಬಂದನು. ತಂದ ಪ್ರಸಾದವನ್ನು ಚಿನ್ನದ ಹರಿವಾಣದಲ್ಲಿ ಕಲ್ಲಪೆಟ್ಟಿಗೆಯೊಳಗೆ ಇಟ್ಟನು.

ಆಳ್ವ ಮರುದಿನ ಮುಂಜಾನೆ ಎದ್ದ. ಕಲ್ಲಪೆಟ್ಟಿಗೆಯಲ್ಲಿ ಮಗು ಅಳುವ ಸದ್ದು ಕೇಳಿತು. ಆಳ್ವ ಅತ್ತ ಓಡಿದ. ಕಲ್ಲಪೆಟ್ಟಿಗೆ ಮುಚ್ಚಳ ತೆರೆದ. ಏನು ನೋಡುವುದು. ಹೊನ್ನಗೊಂಬೆಯಂಥ ಹೆಣ್ಣುಮಗು. ಆಳ್ವ ಕುಲದ ಕುಡಿ ಕಂಡು ಮುದಗೊಂಡ. ಎತ್ತಿ ಮುದ್ದಾಡಿದ.

ಹತ್ತು ದಿನ ಕಳೆಯಿತು. ಹನ್ನೊಂದನೆಯ ದಿನ ಬಂತು. ಮಗುವಿಗೆ ಶುದ್ಧವಾಯಿತು. ಸತ್ಯದ ಮಗುವಿಗೆ ಸತ್ಯಲೋಕದ ಸಿರಿ ಎಂದು ಹೆಸರಿಟ್ಟ. ಗರತಿಯರು ತೊಟ್ಟಿಲು ಕಟ್ಟಿದರು. ಮಗುವಿಗೆ ಮುತ್ತಿಟ್ಟರು. ಜೋಗುಳ ಹಾಡಿ ತೂಗಿದರು.

ಸಿರಿಯ ಹುಟ್ಟಿನ ಕತೆ ಸತ್ಯನಾಪುರ ತುಂಬಿತು. ನೆರೆ ಊರೆಲ್ಲ ಮುಟ್ಟಿತು. ಬಸರೂರ ಬೀಡಿಗೆ ಶಂಕರ ಪೂಂಜೆತಿ ಯಜಮಾನಿ. ಮಗುವನ್ನು ನೋಡಲು ಬಂದಳು. ಸಿರಿಯನ್ನು ಕಂಡಳು. ಹೊನ್ನ ಸೊಬಗಿಗೆ ಸೋತಳು. ಸಿರಿಗೆ ತೊಟ್ಟಿಲ ಸೀರೆ ಹಾಕಿದಳು. ತನ್ನ ಮಗ ಕಾಂತಣನಿಗೆ ತರುವುದಾಗಿ ಮಾತುಕೊಟ್ಟಳು.

ಸಿರಿಗೆ ವರ್ಷ ಆರು ತುಂಬಿತು. ಏಳು ಬಂತು. ಮಾತಿನಂತೆ ಬಸರೂರು ಬೀಡಿನವರು ಸತ್ಯನಾಪುರದ ಅರಮನೆಗೆ ಬಂದರು. ಮದುವೆಯ ಮಾತು ಆಡಿದರು. ಸಿರಿ ಮದುವೆ ಗಂಡಿಗೆ ಷರತ್ತನ್ನು ಒಡ್ಡುತ್ತಾಳೆ. ''ಅಜ್ಜನ ಹಿತವನ್ನು ನೋಡಿಕೊಳ್ಳಬೇಕು. ಸತ್ಯನಾಪುರದ ಅರಮನೆಯನ್ನು ಬೆಳಗಿಸಬೇಕು''ಎಂದಳು. ಗಂಡು ಕಾಂತಣ ಒಪ್ಪಿದ. ಮಾತು ಸರಿಯಾಯಿತು. ಮದುವೆ ದಿನ ನಿಶ್ಚಯವಾಯಿತು. ಎರಡೂ ಕಡೆಯಲ್ಲೂ ಮದುವೆ ಏರ್ಪಾಡು ನಡೆಯಿತು. ಚಪ್ಪರ ತೋರಣ ಸಿದ್ಧವಾಯಿತು. ಬೆಳ್ಳಿ ಬಂಗಾರ ಮಾಡಿಯಾಯಿತು. ಜವುಳಿ ಜೀನಸು ತಂದಾಯಿತು.

ಮದುವೆಯ ದಿನ ಬಂತು. ಮುಂಜಾನೆಯಲ್ಲಿ ಮಂಗಳ ವಾದ್ಯಗಳು ಮೊಳಗಿದವು. ಬೆಡಿ ಗರ್ನಾಲು ಸಿಡಿದವು. ಸತ್ಯನಾಪುರದ ಅರಮನೆಯಲ್ಲಿ ಎಲ್ಲೆಲ್ಲೂ ಸಡಗರ. ಮುತ್ತೈದೆಯರು ಸಿರಿಗೆ ಮಂಗಳ ಸ್ನಾನ ಮಾಡಿಸಿದರು. ತಲೆಗೆ ಪರಿಮಳದ ಎಣ್ಣೆ ಹಚ್ಚಿದರು. ಸೊಬಗಿಂದ ಹೆರಳು ಬಾಚಿದರು. ಬಾಚಿ ಜಡೆ ಹೆಣೆದರು. ಮಲ್ಲಿಗೆಯ ಜಲ್ಲಿ ಬಿಟ್ಟರು. ಬಗೆಬಗೆಯ ಹೂ ಮುಡಿಸಿದರು. ವಿಧವಿಧದ ಚಿನ್ನ ತೊಡಿಸಿದರು.

ಪಟ್ಟೆಸೀರೆ ಕುಪ್ಪಸ ಉಡಿಸಿದರು. ಅಂಗ ಸಿಂಗಾರವಾದ ಸಿರಿ ಕಣ್ಣಿಗೆ ಬಂಗಾರವಾದಳು.

ಅಂಗಳದಲ್ಲಿ ಪಲ್ಲಕ್ಕಿ ಸಿದ್ಧವಾಯಿತು. ಹೂ ಮಾಲೆಗಳಿಂದ ಸಿಂಗರವಾಯಿತು. ಸಿರಿ ದೇವರಿಗೆ ನಮಸ್ಕಾರ ಮಾಡಿದಳು. ಹಿರಿಯರ ಕಾಲಿಗೆ ಎರಗಿದಳು. ಪಲ್ಲಕ್ಕಿ ಏರಿದಳು. ಬೋವಿಗಳು ಹೊತ್ತು ನಡೆದರು. ದಿಬ್ಬಣ ಸತ್ಯನಾಪುರದ ಅರಮನೆಯಿಂದ ಹೊರಟಿತು. ಬಸರೂರು ಬೀಡಿಗೆ ಬಂದಿತು. ಗಂಡಿನವರು ದಿಬ್ಬಣವನ್ನು ಎದುರುಗೊಂಡರು. ಬಣ್ಣದ ಚಪ್ಪರಕ್ಕೆ ಕರೆತಂದರು. ಆದರಿಸಿ ಉಪಚರಿಸಿದರು.

ಮದುಮಕ್ಕಳನ್ನು ಧಾರೆ ಮಂಟಪಕ್ಕೆ ಕರೆತಂದರು. ಹಸೆಮಣೆಯಲ್ಲಿ ಕುಳ್ಳಿರಿಸಿದರು. ಕಾಂತಣನ ಕೈಯಲ್ಲಿ ಸಿರಿಯ ಕೈಯನ್ನಿರಿಸಿದರು. ಆಳ್ವ ಸಿರಿಯನ್ನು ಕಾಂತಣನಿಗೆ ಧಾರೆ ಎರೆದು ಕೊಟ್ಟ. ಬಂದವರು ಹರಸಿದರು. ಸಮ್ಮಾನ ಉಂಡು ಕೊಂಡಾಡಿದರು.

ದಿಬ್ಬಣ ಸತ್ಯನಾಪುರಕ್ಕೆ ಹೊರಡಲು ಸಜ್ಜಾಯಿತು. ಆಳ್ವ ಸಿರಿಗೆ ಬುದ್ಧಿಮಾತು ಹೇಳಿದ. ತಲೆಗೆ ಕೈಇಟ್ಟು ಹರಸಿದ. ಬಾಳು ಬಂಗಾರವಾಗಲಿ ಎಂದ. ಬಂದ ದಿಬ್ಬಣ ಹಿಂದಿರುಗಿತು. ಬಸರೂರು ಬೀಡಿನಲ್ಲಿ ಹೊಸ ಹರುಷ ತುಂಬಿತು. ಸಿರಿ-ಕಾಂತಣರು ಸರಸ ಸಂತಸದಿಂದ ಕೂಡಿದರು. ಸುಖ ಸಂತೋಷ ಕಂಡರು. ವರುಷ ಕಳೆಯಿತು. ಕಾಂತಣನಿಗೆ ಸೂಳೆ ಸಿದ್ದುವಿನ ಹಳೆಯ ಸಂಗಾಟ ಮತ್ತೆ ಶುರುವಾಯಿತು. ದಿನದಿನಕ್ಕೆ ಸಿದ್ದುವಿನ ಒಡನಾಟ ಹೆಚ್ಚಿತು. ಸಿರಿ ಗಂಡನಿಗೆ ತಿಳಿ ಹೇಳಿದಳು. ಅತ್ತಳು, ಗೋಗರೆದಳು. ಏನೂ ಪರಿಣಾಮ ಆಗಲಿಲ್ಲ.

ಸಿರಿಗೆ ಮಾಯದ ಬಸುರು ಬಂದಿತು. ಏಳು ತಿಂಗಳು ತುಂಬಿತು. ಕಾಂತಣ ಸತ್ಯನಾಪುರದ ಅರಮನೆಗೆ ಬಂದ. ಬಯಕೆಗೆ ದಿನ, ಗಳಿಗೆ ನೋಡಿ ಬಂದ. ಆಳ್ವ, ಕಾಂತಣ ಸೇರಿ ಕಾರ್ಕಳಕ್ಕೆ ಹೋದರು. ಬಯಕೆ ಸೀರೆ ತೆಗೆದರು. ಅಲ್ಲಿಂದ ಆಳ್ವ ಸತ್ಯನಾಪುರಕ್ಕೆ ಹೊರಟ. ಕಾಂತಣ ಬಸರೂರು ಹಾದಿ ಹಿಡಿದ. ಬಸರೂರು ಪೇಟೆ ತಲುಪಿದ. ಕಾಂತಣನಿಗೆ ಸಿದ್ದುವಿನ ನೆನಪಾಯಿತು. ಮೋಹ ಎಳೆಯಿತು. ಸಿದ್ದುವಿನ ಮನೆಗೆ ಬಂದ. ಸಿದ್ದು ಕಾಂತಣನನ್ನು ಕಂಡಳು. ಓಡಿ ಬಂದಳು. ಅವನ ಕೈ ಹಿಡಿದು

ಒಳಗೆ ಕರೆದುಕೊಂಡು ಹೋದಳು. ಹಾಲು ಹಣ್ಣು ಇತ್ತು ಉಪಚರಿಸಿದಳು. ಸಿದ್ದು ಕಾಂತಣ ತಂದ ಬಯಕೆ ಸೀರೆ ಕಂಡಳು. 'ಏನು ಚಂದ. ಉಟ್ಟರೆ ಇಂಥ ಸೀರೆ ಉಡಬೇಕು' ಎಂದಳು. ಮೈಗೆ ಇಟ್ಟು ಕಂಡಳು. ಉಟ್ಟು ಬಂದಳು. ಕಾಂತಣ ಸಿದ್ದುವಿನ ಸಂಗದಲ್ಲಿ ಮೂರು ದಿನ ಕಳೆದ, ಮನೆಗೆ ಮರಳಿದ.

ಬಯಕೆಯ ದಿನ ಬಂದಿತು. ಬಿರುಮ ಆಳ್ವ ಕೊಂಬು ವಾಲಗದ ದಿಬ್ಬಣದಲ್ಲಿ 'ಹೊರೆ' ತಂದ. ಗರತಿಯರು ಸಿರಿಯನ್ನು ಸಿಂಗರಿಸಿದರು. ಚಿನ್ನ ಬೆಳ್ಳಿ ತೊಡಿಸಿದರು. ಪಟ್ಟೆ ಸೀರೆ ಉಡಿಸಿದರು. ಸಿಂಗಾರದ ಮಂಟಪದಲ್ಲಿ ಕುಳ್ಳಿರಿಸಿದರು. ಮುತ್ತಿನ ಆರತಿ ಬೆಳಗಿದರು.

ಬಯಕೆ ಸೀರೆ ಕೊಡುವ ಗಳಿಗೆ ಬಂದಿತು. ಮಂಗಳ ವಾದ್ಯ ಮೊಳಗಿತು. ಕಾಂತಣ ಬೆಳ್ಳಿತಟ್ಟೆಯಲ್ಲಿ ಬಯಕೆ ಸೀರೆ ಇಟ್ಟು ತಂದ. ಸಿರಿಯ ಮುಂದೆ ಹಿಡಿದ. ಸಿರಿ ಅದನ್ನು ಕಂಡಳು. ''ಈ ಸೀರೆಯನ್ನು ನಾನು ಮುಟ್ಟಲಾರೆ. ಇದು ಸೂಳೆ ಸಿದ್ದು ಉಟ್ಟ ಸೀರೆ. ಮೈಲಿಗೆಯಾಗಿದೆ ನಾನು ಉಡಲಾರೆ'' ಎಂದಳು. ತುಂಬಿದ್ದ ಹರುಷ ಇಳಿಯಿತು. ಕಳೆ ಕಳೆಯಿತು. ಗಂಡ, ಅತ್ತೆ ಸಿಟ್ಟಾದರು. ಮನೆತನದ ಮಾನ ಕಳೆದೆ ಎಂದು ಕಿಡಿನುಡಿದರು. ಸಮ್ಮಾನದ ಊಟ ಮುಗಿಯಿತು. ಸಿರಿ ಗಂಡ, ಅತ್ತೆಗೆ ನಮಿಸಿದಳು. ಪಲ್ಲಕ್ಕಿಯಲ್ಲಿ ಕುಳಿತಳು. ದಿಬ್ಬಣ ಸತ್ಯನಾಪುರಕ್ಕೆ ಹೊರಟು ಬಂದಿತು.

ದಿನ ಕಳೆಯಿತು. ಬಸುರಿಗೆ ತಿಂಗಳು ತುಂಬಿತು. ಬೇನೆ ಕಾಣಿಸಿತು. ಅಜ್ಜ ಸೂಲಗಿತ್ತಿಯನ್ನು ಕರೆಸಿದ. ಗಂಡ ಕಾಂತಣನಿಗೆ ಓಲೆ ಬರೆದ. ಕೂಡಲೆ ಬರುವಂತೆ ಸುದ್ದಿ ಕಳುಹಿಸಿದ. ಕಾಂತಣ ಬರಲಿಲ್ಲ. ಬಿರುಮ ಆಳ್ವ ಕುಲದೈವವನ್ನು ನೆನೆದ. ಸಿರಿಗೆ ಹೆರಿಗೆ ಸುಖವಾಗಲಿ ಎಂದು ಕೈ ಮುಗಿದು ಬೇಡಿದ. ಹರಕೆ ಹೇಳಿದ. ಮುಡಿಪು ಕಟ್ಟಿದ.

ಸಿರಿಗೆ ಹೆರಿಗೆ ಸುಖವಾಯಿತು. ಗಂಡು ಮಗು ಹುಟ್ಟಿತು. ಆಳ್ವನಿಗೆ ಹೊಸ ಭಾಗ್ಯ ಬಂದಂತೆ ಆಯಿತು. ಬಸರೂರಿಗೆ ಓಲೆ ಬರೆದ. ಮಗು ಹುಟ್ಟಿದ ಸುದ್ದಿ ತಿಳಿಸಿದ. ಆಗಲೂ ಕಾಂತಣ ಬರಲಿಲ್ಲ. ಮಗುವಿಗೆ ಶುದ್ಧ ಆಗಬೇಕು. ಹೆಸರು ಇಡಬೇಕು. ಗಳಿಗೆ ತಿಳಿದು ಬರಬೇಕು, ಬನ್ನಿ ಎಂದು ಕಾಂತಣನಿಗೆ ಮತ್ತೊಂದು ಓಲೆ ಬರೆದ. ಆಗಲೂ

ಕಾಂತಣ ಬರಲಿಲ್ಲ.

ಅಜ್ಜ ಬಿರುಮ ಆಳ್ವ ಎದ್ದು ಹೊರಟ. ಜೋಯಿಸರ ಮನೆಗೆ ಬಂದ. ಜೋಯಿಸರಿಗೆ ಕೈ ಮುಗಿದ. ''ನನ್ನ ಮಗಳು ಸತ್ಯದ ಸಿರಿ ಹಡೆದಿದ್ದಾಳೆ, ಗಂಡು ಮಗು. ಮಗುವಿನ ಹುಟ್ಟು ಗಳಿಗೆ ನೋಡಿ ಹೇಳಬೇಕು'' ಎಂದ. ಜೋಯಿಸರು ಗುಣಿಸಿ ಎಣಿಸಿದರು. ''ಮಗು ಹುಟ್ಟಿದ ಗಳಿಗೆ ಕೆಟ್ಟದು. ಮಗುವನ್ನು ನೋಡಿದರೆ ಅಜ್ಜನಿಗೆ ಮರಣ. ತಾಯಿಗೆ ದೇಶಾಂತರ. ತಂದೆಗೆ ದಿನಕ್ಕೆ ನೂರು ಬುದ್ಧಿ'' ಎಂದು ಹೇಳಿದರು. ಆಳ್ವ ಅರಮನೆಗೆ ಬಂದ. ಜೋಯಿಸರು ಆಡಿದ ಮಾತನ್ನು ಸಿರಿಗೆ ಹೇಳಿದ. ಅದರಂತೆ ಅಜ್ಜ ಮಗುವನ್ನು ನೋಡದಂತೆ ಎಚ್ಚರ ವಹಿಸಿದರು. ಮಗುವಿಗೆ ಶುದ್ಧ ಆಗುತ್ತದೆ. ಕುಮಾರ ಎಂದು ಹೆಸರಿಟ್ಟರು. ಬಂಗಾರದ ತೊಟ್ಟಿಲಲ್ಲಿ ಇಟ್ಟರು. ಜೋಗುಳ ಹಾಡಿ ತೂಗಿದರು.

ದಿನಗಳು ಕಳೆದವು. ಒಂದು ದಿನ ಸಿರಿ ಮಗುವಿಗೆ ಸ್ನಾನ ಮಾಡಿಸಿದಳು. ಜೋಗುಳ ಹಾಡಿ ತೂಗಿದಳು. ನಿದ್ದೆ ಮಾಡಿಸಿದಳು. ಬಟ್ಟೆ ಒಗೆಯಲು ಕೆರೆಗೆ ಹೋದಳು. ದಾರು ಹಸುವಿನ ಹಾಲು ಹಿಂಡಲು ಹೋದಳು. ಮಗುವಿಗೆ ಎಚ್ಚರವಾಯಿತು. ಅಳಲು ತೊಡಗಿತು. ಅಜ್ಜ ಸಿರಿಯನ್ನು ಕರೆದ. ದಾರುವನ್ನು ಕೂಗಿದ. ಯಾರೂ ಕಾಣಲಿಲ್ಲ. ಮಗುವಿನ ಅಳು ಹೆಚ್ಚಾಯಿತು. ಅಜ್ಜನ ಮನಸ್ಸು ಕರಗಿತು. ಹೃದಯ ಕರೆಯಿತು. ಅಜ್ಜ ತಡೆಯಲಾರದೆ ಒಳಹೋದ. ಮಗುವನ್ನು ಕಂಡ. ಎತ್ತಿಕೊಂಡ. ಹೊರ ಚಾವಡಿಗೆ ತಂದ. ಮುತ್ತಿಟ್ಟು ಮುದ್ದಾಡಿದ. ತೊಡೆಯ ಮೇಲಿಟ್ಟು ಆಡಿಸಿದ.

ಸಿರಿ ಕೆರೆಯಿಂದ ಬಂದಳು. ಅಜ್ಜನ ತೊಡೆಯಲ್ಲಿ ಮಗುವನ್ನು ಕಂಡಳು. ಓಡಿ ಬಂದಳು. ಮಗುವನ್ನು ಎತ್ತಿಕೊಂಡಳು. ಒಳನಡೆದಳು, ಹಾಲುಣಿಸಿದಳು, ತೂಗಿ ಮಲಗಿಸಿದಳು.

ಅಜ್ಜನಿಗೆ ಹಾಲು ತಂದಳು. ಆಳ್ವ ಅಲ್ಲೆ ಕಂಬಕ್ಕೆ ಒರಗಿದ್ದ. ಸಿರಿ 'ಅಜ್ಜಾ ಅಜ್ಜಾ' ಎಂದು ಕರೆದಳು. ಮಾತಿಲ್ಲ, ಮುಟ್ಟಿ ನೋಡಿದಳು. ಅಜ್ಜನ ಉಸಿರು ನಿಂತಿತ್ತು. ಪ್ರಾಣ ಹಾರಿತ್ತು. ಸಿರಿ ಅಜ್ಜನ ಮೇಲೆ ಬಿದ್ದು ಬಿದ್ದು ಅತ್ತಳು.

ಗಂಡ ಕಾಂತಣನಿಗೆ ಓಲೆ ಬರೆದಳು. ಕರೆ ಕಳುಹಿಸಿದಳು. ಅಜ್ಜನ ಶವಸಂಸ್ಕಾರ ಮಾಡಬೇಕು. ನೀವು ಕೂಡಲೇ ಬನ್ನಿ ಎಂದು ವಿನಂತಿ ಮಾಡಿದಳು. ಆಗಲೂ ಕಾಂತಣ ಬರಲಿಲ್ಲ.

ಸೂಡದ ಬೀಡಿನಲ್ಲಿ ಅಣ್ಣು ಶೆಟ್ಟಿ. ಅವನ ಹೆಂಡತಿ ಬೊಮ್ಮಿ. ಬೊಮ್ಮಿ ಬಿರುಮ ಆಳ್ವನಿಗೆ ಕುಟುಂಬದ ದೂರದ ಸಂಬಂಧದಿಂದ ತಂಗಿ. ಅವಳ ಮಗ ಶಂಕರ ಆಳ್ವ. ಶಂಕರ ಆಳ್ವನಿಗೆ ಸತ್ಯನಾಪುರದ ಅರಮನೆಯ ಸೊತ್ತಿನ ಮೇಲೆ ಆಸೆ. ಇದಕ್ಕಾಗಿ ಸಿರಿಯನ್ನು ಮದುವೆಯಾಗುವ ಕನಸು ಕಂಡಿದ್ದ. ಅರಮನೆಯ ಆಸ್ತಿಗಾಗಿ ಕಾದಿದ್ದ. ಆದರೆ ಸಿರಿಯ ಮದುವೆ ಕಾಂತಣನೊಂದಿಗೆ ನಿಶ್ಚಯವಾದಾಗ ಶಂಕರ ಆಳ್ವ ಸಿಟ್ಟಾದ. '' ಸಿರಿ ನನಗೆ ಸೇರಬೇಕಾದವಳು. ಅವಳನ್ನು ನನಗೆ ಮದುವೆ ಮಾಡಿಕೊಡಿ. ಅರಮನೆಯ ಅಧಿಕಾರ ಬರೆದುಕೊಡಿ'' ಎಂದ. ಬಿರುಮ ಆಳ್ವ ಒಪ್ಪಲಿಲ್ಲ. ಶಂಕರ ಆಳ್ವ ನಿರುಪಾಯನಾದ. ಸೂಡದ ಬೀಡಿಗೆ ಮರಳಿದ. ಎದೆಯಲ್ಲಿ ಸೇಡು ಉಳಿಯಿತು. ಇದೆಲ್ಲವೂ ಕಾಂತಣನಿಗೆ ತಿಳಿದಿತ್ತು.

ಈಗ ಸತ್ಯನಾಪುರದಲ್ಲಿ ಅಜ್ಜ ಸತ್ತಿದ್ದಾರೆ. ಸಿರಿಯ ಸೊಕ್ಕು ಮುರಿಯಲು ಇದು ಒಳ್ಳೆಯ ಹೊತ್ತು ಎಂದುಕೊಂಡ ಕಾಂತಣ. ಶಂಕರ ಆಳ್ವನಿಗೆ ಓಲೆ ಬರೆದ. ''ಸತ್ಯನಾಪುರದಲ್ಲಿ ಅಜ್ಜ ಸತ್ತಿದ್ದಾರೆ. ನಾನು ಬರುವುದಿಲ್ಲ. ನೀವುಕೂಡಲೇ ಹೋಗಿ ಅಜ್ಜನ ಶವಸಂಸ್ಕಾರ ಮಾಡಿ. ನಿಮ್ಮ ಹಕ್ಕು ಕೇಳಲು ಇದು ತಕ್ಕ ಕಾಲ '' ಎಂದು ಚಾಡಿ ಹೇಳಿದ.

ಶಂಕರ ಆಳ್ವ ಸತ್ಯನಾಪುರಕ್ಕೆ ಓಲೆ ಬರೆದ. ಓಡಿ ಬಂದ. ಸಿರಿಗೆ ಸಮಾಧಾನ ಹೇಳಿದ. '' ಅಳಬೇಡ, ಅಜ್ಜನ ಕುಟುಂಬದಲ್ಲಿ ನಾನಿದ್ದೇನೆ. ಶವಸಂಸ್ಕಾರ ಮಾಡುತ್ತೇನೆ. ಸತ್ಯನಾಪುರದ ಅರಮನೆಯ ಆಸ್ತಿ, ಅಧಿಕಾರ ನನಗೆ ಬಿಟ್ಟುಕೊಡು'' ಎಂದ. ಸಿರಿ ಸಿಟ್ಟಿನಿಂದ ಕೆಂಪಾದಳು. ''ಇಲ್ಲಿ ಅರಮನೆಯಲ್ಲಿ ಅಜ್ಜನ ಮಗಳು ನಾನಿದ್ದೇನೆ. ಇಲ್ಲಿನ ಹಕ್ಕು, ಅಧಿಕಾರ ನನ್ನದು. ಸೂಡದ ಬೀಡಿನವನಿಗೆ ಇಲ್ಲಿ ಏನು ಹಕ್ಕು? ಅಜ್ಜನ ಹೆಣವನ್ನು ಮುಟ್ಟಬೇಡ. ಇಲ್ಲಿಂದ ಹೊರಟುಹೋಗು'' ಎಂದಳು. ಶಂಕರ ಆಳ್ವ ಕೆರಳಿದ. ಅವಮಾನದಿಂದ ಹೊರಟು ಹೋದ.

ಸಿರಿ ಮತ್ತು ದಾರು ಅಜ್ಜನ ಹೆಣವನ್ನು ಹೊತ್ತರು. ಸುಡುಗಾಡಿಗೆ ನಡೆದರು. ಕಾಟದಲ್ಲಿ ಇಟ್ಟರು. ಕೈಮುಗಿದು 'ಜೀವ ಸ್ವರ್ಗ ಸೇರಲಿ' ಎಂದು ಬೆಂಕಿ ಕೊಟ್ಟರು. ಸಂಸ್ಕಾರ ಮಾಡಿದರು. ಅರಮನೆಗೆ ಮರಳಿದರು. ಅಜ್ಜ ಇಲ್ಲದ ಅರಮನೆ ಸಿರಿಗೆ ಸುಡುಗಾಡಾಯಿತು.

ಸತ್ಯನಾಪುರದಿಂದ ಹೊರಟ ಶಂಕರ ಆಳ್ವ ಬಸರೂರಿಗೆ ಬಂದ. ಕಾಂತಣನಿಗೆ ನಡೆದ ಸಂಗತಿ ಎಲ್ಲಾ ಹೇಳಿದ. ಮುಂದೇನು ಮಾಡುವುದು ಎಂದು ಕೇಳಿದ. ''ಅರಮನೆಯ ಹಕ್ಕು ಇರುವುದರಿಂದ ಅವಳಿಗೆ ಇಷ್ಟು ಸೊಕ್ಕು. ಆ ಹಕ್ಕನ್ನು ಇಲ್ಲ ಎಂದು ಮಾಡಬೇಕು. ಪಂಚಾಯಿತಿ ಕೂಟ ಸೇರಿಸಿ, ಅರಮನೆಯ ಹಕ್ಕು ನಿಮಗೆ ಎಂದು ಮಾಡಿ. ಆಗ ಅವಳ ಸೊಕ್ಕು ಮುರಿಯುತ್ತದೆ. ಬುದ್ಧಿ ಬರುತ್ತದೆ'' ಎಂದ.

ಶಂಕರ ಆಳ್ವ ಸಂತಸಗೊಂಡ. ಸೂಡದ ಬೀಡು ಸೇರಿದ.

''ಸತ್ಯನಾಪುರದ ಅರಸ ಬಿರುಮ ಆಳ್ವರು ಮರಣ ಹೊಂದಿದ್ದಾರೆ. ನಾನು ಬಿರುಮ ಆಳ್ವರ ಕುಟುಂಬದಲ್ಲಿ ಹುಟ್ಟಿದವನು. ಅವರ ಅಳಿಯ, ತಂಗಿಯ ಮಗ. ಅರಮನೆಗೆ ಉತ್ತರಾಧಿಕಾರಿ. ನನಗೆ ಪಟ್ಟಕಟ್ಟಿಸಿ ಪಟ್ಟದುಂಗುರ ಇಡಿಸಬೇಕು'' ಎಂದು ಪಂಚಾಯಿತಿಗೆ ದೂರು ಕೊಟ್ಟ. ನ್ಯಾಯ ಕೂಟ ಸೇರಿಸಿದ. ಸಿರಿಯನ್ನು ಕೂಟದ ಕಟ್ಟೆಗೆ ಕರೆಸಿದರು. ಅಲ್ಲಿ ಸಿರಿಗೆ ಅವಮಾನ ಮಾಡಿದರು. ''ಗಂಡಸರು ಆಳಿಕೊಂಡು ಬಂದ ಸಿಂಹಾಸನದಲ್ಲಿ ಹೆಂಗಸಿಗೆ ಅಧಿಕಾರ ಇಲ್ಲ'' ಎಂದು ತೀರ್ಮಾನ ಆಯಿತು. ಸಿರಿ ಸಿಟ್ಟಿನಿಂದ ಕಟ್ಟೆ ಇಳಿದು ಬಂದಳು. ''ಸತ್ಯನಾಪುರದ ನೆಲ ಬಂಜರು ಬೀಳಲಿ. ಅರಮನೆ ಸುಟ್ಟು ಹೋಗಲಿ'' ಎಂದು ಮಣ್ಣು ಮುಟ್ಟಿ ಶಾಪ ಕೊಟ್ಟಳು. ಅರಮನೆಗೆ ಬಂದಳು. ದಾರುವನ್ನು ಕರೆದಳು. ಕುಮಾರನ ತೊಟ್ಟಿಲನ್ನು ಹೊರಿಸಿದಳು. ಅರಮನೆ ಬಿಟ್ಟು ನಡೆದಳು. ಬಸರೂರು ಬೀಡಿಗೆ ಬಂದಳು.

ಕಾಂತಣ ದೂರದಿಂದಲೇ ಸಿರಿ ಬರುವುದನ್ನು ಕಂಡ. ಮುಂಬಾಗಿಲಿಗೆ ಬಂದ. ''ನಾನು ಹೆರಿಗೆಗೆ ಹಣ ಕೊಡಲಿಲ್ಲ. ತೊಟ್ಟಿಲ ಮಗುವನ್ನು ಕರೆಯಲಿಲ್ಲ. ಇಲ್ಲಿಗೆ ಏಕೆ ಬಂದೆ?'' ಎಂದು ಅಬ್ಬರದಿಂದ ಕೇಳಿದ.

ಬಸರೂರ ಬದುಕಿಗಾಗಿ ನಾನು ಬಂದಿಲ್ಲ. ನಿಮ್ಮ ಸಂಪತ್ತು ಸಿದ್ದುವಿಗೆ ಆಗಲಿ. ನನ್ನನ್ನು ಬಿಟ್ಟುಬಿಡಿ ಎಂದಳು.

ಕಾಂತಣನಿಗೆ ಸಿಟ್ಟು ಏರಿತು. ಸಿರಿಯನ್ನು ಬೈದು ಒದರಾಡಿದ. ಸಿರಿ ಕೆರಳಿದಳು. ಕೈ ಬಳೆಗಳನ್ನು ಒತ್ತಿ ಒಡೆದಳು. ಕತ್ತಿನ ಕರಿಮಣಿಯನ್ನು ಕಿತ್ತು ಒಗೆದಳು. ಮೂಗಿನ ಮೂಗುತಿಯನ್ನು ತೆಗೆದು ಕೈಯಲ್ಲಿ ಹಿಡಿದಳು. ''ಇನ್ನು ಮುಂದಾದರೂ ದುಷ್ಟ ಗಂಡನೊಡನೆ ಬಾಳುವ ಹೆಣ್ಣಿನ ಗೋಳು ತಪ್ಪಬೇಕು. ಅಂಥ ಹೆಣ್ಣಿಗೆ ಎರಡನೆ ಮದುವೆಯಾಗುವ ನಿಯಮ ಇಂದಿನಿಂದಲೇ ಬರಬೇಕು. ಒಮ್ಮೆ ವಿಧವೆಯಾದವಳು ಮತ್ತೊಮ್ಮೆ ಮುತ್ತೈದೆಯಾಗುವ ಭಾಗ್ಯ ಬರಬೇಕು'' ಎಂದು ಹೇಳಿದಳು. ನನಗೆ ಬಿಡುಗಡೆ ಕೊಡಿ ಎಂದಳು. '' ಅಷ್ಟು ಸೊಕ್ಕೆ ನಿನಗೆ? ಹಾಗಾದರೆ ಹೋಗು ನಡೆ. ಇಂದು ಸೂರ್ಯ ಮುಳುಗುವ ಮೊದಲು ನೀನು ಮಾಬುಕಳ ದಾಟಬೇಕು. ಅದೇ ನಿನಗೆ ನನ್ನಿಂದ ಬಿಡುಗಡೆ. ''ಇಲ್ಲದಿದ್ದರೆ ನಿನ್ನ ಜುಟ್ಟು ಹಿಡಿದು ಬಸರೂರು ಅರಮನೆಗೆ ಎಳೆದು ತರುವೆ'' ಎಂದು ಕಾಂತಣ ಗುಡುಗಿದ.

ಸಿರಿ ಬಸರೂರು ಗುತ್ತು ಇಳಿದು ನಡೆದಳು. ತೊಟ್ಟಿಲನ್ನು ಹೊತ್ತು ದಾರು ಹಿಂದಿನಿಂದ ಹೊರಟಳು. ಹತ್ತಾರು ಊರು ಬಿಟ್ಟು ಮುಂದೆ ನಡೆದರು. ಆಗಲೇ ಸೂರ್ಯ ಕೆಂಪು ಚೆಂಡಿನಂತೆ ಆಗಿದ್ದ. ಮಾಬುಕಳ ನದಿ ದಡ ಸೇರಿದರು. ದಡದಲ್ಲಿ ಒಂದೂ ದೋಣಿ ಇಲ್ಲ. ಸಿರಿ ಅಂಬಿಗನನ್ನು ಕರೆದಳು. ಅಂಬಿಗ ಒಲ್ಲೆ ಎಂದ. ಕುಂಟು ನೆಪ ಒಡ್ಡಿದ. ಸಿರಿ ಮತ್ತೆ ಮತ್ತೆ ಬೇಡಿದಳು. ''ಏನೇ ಆದರೂ ಇಂದು ದೋಣಿ ಬಿಡೆ. ಇಂದು ಇಲ್ಲಿ ತಂಗಿ, ನಸುಕಿಗೆ ನದಿ ದಾಟಿಸುತ್ತೇನೆ'' ಎಂದ.

ಸಿರಿಗೆ ನದಿ ದಾಟುವ ದಾರಿ ಕಾಣಲಿಲ್ಲ. ಆದರೂ ಎದೆಗೆಡಲಿಲ್ಲ. ಸಿರಿ ಕೊಡಿ ಬಾಳೆ ಎಲೆ ಕಿತ್ತು ತಂದಳು. ನದಿಯ ನೀರಿಗೆ ಇಳಿದಳು. ಕೈ ಮುಗಿದು ನಿಂತಳು. ಕುಲದೈವ ಬ್ರಹ್ಮನನ್ನು ನೆನೆದಳು.

''ನಾನು ಸತ್ಯದ ಮಗಳು ನಿಜವಾದರೆ ಈಗ ಸತ್ಯ ಗೆಲ್ಲಬೇಕು. ಹರಿವ ನದಿಯ ನೀರಿನ ನಡುವೆ ದಾರಿಯಾಗಬೇಕು. ನಾನು ನದಿ ದಾಟಬೇಕು'' ಎಂದಳು.

ಕೊಡಿ ಬಾಳೆ ಎಲೆಯನ್ನು ನದಿಗೆ ಬಿಟ್ಟಳು. ನದಿಯ ನಡುವೆ ದಾರಿಯಾಯಿತು. ಸತ್ಯ ಬೆಳಗಿತು. ಸಿರಿ, ದಾರು, ನದಿ ದಾಟಿದರು.

ಹೊತ್ತು ಮುಳುಗಿತು. ಕತ್ತಲಾಯಿತು. ನೀರಿಲ್ಲದ ದಾರಿ. ಜನರಿಲ್ಲದ ಹಾದಿ. ಮುಂದೆ ಕಂಡ ಕಂಚಿಮಾದೇವಿಯ ಅರಮನೆಗೆ ಬಂದರು. ''ಅಮ್ಮಾ ಬಹಳ ದೂರದಿಂದ ಬಂದಿದ್ದೇವೆ. ನಾವು ಹೆಂಗಸರು. ರಾತ್ರಿಯಾಯಿತು. ಅರಮನೆಯಲ್ಲಿ ಈ ರಾತ್ರಿ ತಂಗಲು ಜಾಗ ಕೊಡಿ'' ಎಂದು ಕೇಳಿದಳು. ''ನೀವು ಹೆಂಗಸರು, ಇಲ್ಲಿಗೆ ಏಕೆ ಬಂದಿರಿ? ಇಲ್ಲಿ ನನ್ನ ಮಗ ವೀರಭದ್ರಕುಮಾರ ಇದ್ದಾನೆ. ಅವನು ಹೆಣ್ಣು ಮರುಳ. ನಿಮಗೆ ಹೇಗೆ ಜಾಗ ಕೊಡಲಿ?'' ಕಂಚಿಮಾದೇವಿ ಎಂದಳು. ''ನಿಮ್ಮ ಮಗನಿಗೆ ನೀವು ತಾಯಿ. ಅವನಿಗೆ ಬುದ್ಧಿ ಹೇಳಿ'' ಸಿರಿ ಹೇಳಿದಳು. ಹಾಗೆಯೇ ಆ ರಾತ್ರಿ ಅಲ್ಲಿ ಮಲಗಿದರು. ನಡುರಾತ್ರಿ ಹೊತ್ತು ವೀರಭದ್ರ ಸಿರಿಯ ಬಳಿಗೆ ಬಂದ. ಸಿರಿಗೆ ಎಚ್ಚರವಾಯಿತು. 'ಹತ್ತಿರ ಬರಬೇಡ, ದೂರ ಹೋಗು' ಎಂದಳು. ಅವನು ಕೇಳಲಿಲ್ಲ. 'ಕಲ್ಲಾಗಿ ಹೋಗು' ಎಂದು ಸಿರಿ ಶಾಪ ಕೊಟ್ಟಳು. ವೀರಭದ್ರ ಕಲ್ಲಾಗಿ ಬಿದ್ದ.

ಬೆಳ್ಳಿ ಮೂಡಿ ಬೆಳಗಾಯಿತು. ಸಿರಿ ಎದ್ದಳು. ಕುಮಾರನ ತೊಟ್ಟಿಲನ್ನು ದಾರುವಿಗೆ ಹೊರಿಸಿದಳು. ಇಬ್ಬರೂ ಅರಮನೆ ಬಿಟ್ಟು ಮುನ್ನಡೆದರು. ಹತ್ತು ಊರು ದಾಟಿದರು. ದಾರಿ ಹಿಡಿದು ನಡೆದರು. ಲಂಕೆ ಲೋಕನಾಡಿಗೆ ಬಂದರು. ಪೂಜಾರಿ ಪೂಜೆ ಮುಗಿಸಿ ಮನೆಗೆ ಹೊರಟಿದ್ದ. ''ದೈವ ದೇವರ ಪೂಜೆ ಮಾಡಿ ಪ್ರಸಾದ ಕೊಡಿ'' ಸಿರಿ ಎಂದಳು. ''ದಿನಕ್ಕೆ ಎರಡು ಪೂಜೆ ಇರುವುದು. ಹೊತ್ತಿನ ಪೂಜೆ ಹೊರತು ಹರಕೆ ಒಪ್ಪಿಸಲು ಆಗದು'' ಪೂಜಾರಿ ನಿರಾಕರಿಸಿದ. ಸಿರಿ ವಿನಯದಿಂದ ಕೇಳಿದಳು. ಮತ್ತೆ ಮತ್ತೆ ಬೇಡಿದಳು. ಪೂಜಾರಿ ಸಿಟ್ಟಾದ. ಕಟುಮಾತು ಆಡಿದ. ಎದ್ದು ಹೊರಟುಹೋದ. ನೋವು ಅವಮಾನದಿಂದ ಸಿರಿ ನೊಂದಳು.

ಸಿರಿ ದೇವಾಲಯದ ಕೆರೆಗೆ ಹೋದಳು. ಮಿಂದು ಮಡಿ ಉಟ್ಟು ಬಂದಳು. ಬ್ರಹ್ಮರ ಗುಡಿಯ ಮುಂದೆ ನಿಂತು ನೆನೆದಳು. ಭಕ್ತಿಯಿಂದ ಹೇಳಿದಳು. ''ನಾನು ಸತ್ಯದ ಮಗಳು ನಿಜವಾದರೆ ಮುಚ್ಚಿದ ಬಾಗಿಲು ತೆರೆಯಬೇಕು. ನಂದಿದ ನಂದಾದೀಪ ಬೆಳಗಬೇಕು. ಎಲ್ಲ ವಾದ್ಯಮೇಳದೊಂದಿಗೆ ಕಟ್ಟುಕಟ್ಟಳೆಯ ಪೂಜೆ ನಡೆಯಬೇಕು''.

ಸತ್ಯದ ಮಹಿಮೆ, ಗುಡಿಯ ಬಾಗಿಲು ತೆರೆಯಿತು. ಪೂಜೆ ನಡೆಯಿತು. ಪೂಜಾರಿ ಓಡಿ ಬಂದ. ನಡೆದುದನ್ನು ಕಂಡ. ಸಿರಿಯ ಕಾಲಿಗೆ ಎರಗಿದ. ಕ್ಷಮೆ ಕೇಳಿದ. ಸಿರಿ, ದಾರು ಮುಂದೆ ನಡೆದರು. ಬಿಸಿಲ ಬೇಗೆಗೆ ದಣಿದರು. ಮುಂದಿನ ಗೋಳಿಮರದ ಕಟ್ಟೆ ಹತ್ತಿದರು. ಮರದ ರೆಂಬೆಗೆ ತೊಟ್ಟಿಲು ಕಟ್ಟಿದರು. ಸಿರಿ ಕುಮಾರನನ್ನು ಮಲಗಿಸಿದಳು. ಹಾಡುತ್ತಾ ತೂಗಿದಳು.

ಇಬ್ಬರು ಯುವಕರು ಓಡೋಡುತ್ತಾ ಬಂದರು. ಸಿರಿಯ ಪಕ್ಕದಲ್ಲಿ ನಿಂತರು. ''ನಾನೇ ಮುಂದೆ, ಇವಳು ನನ್ನ ಹೆಂಡತಿ'' ಎಂದ ಮುಂದೆ ಬಂದವ. ''ಮುಂದೆ ಬಂದವ ನನ್ನ ಹಿರಿಯಣ್ಣ. ಹಿಂದೆ ಬಂದವ ನನ್ನ ಕಿರಿಯಣ್ಣ. ಅಣ್ಣಂದಿರೆ ಇಲ್ಲಿಗೆ ಏಕೆ ಬಂದಿರಿ?'' ಸಿರಿ ಕೇಳಿದಳು.

''ನಾವು ಬೋಳದ ಯುವರಾಜರು. ಕ್ಷತ್ರಿಯ ಸೋದರರು, ಹಿರಿಯವನು ಬಿಳಿಯ ದೇಸಿಂಗರಾಯ, ಕಿರಿಯವನು ಕರಿಯ ಕಾಳಿಂಗರಾಯ. ಬೇಟೆಗಾಗಿ ಪಕ್ಕದ ಕಾಡಿಗೆ ಬಂದಿದ್ದೆವು. ದಣಿವು ಆರಿಸಿಕೊಳ್ಳುತ್ತಾ ಕುಳಿತಿದ್ದೆವು. ಇಂಪಾದ ಹಾಡು ಕೇಳಿಸಿತು. ಹೆಣ್ಣು ಧ್ವನಿ. ''ಓಡಿ ಅವಳನ್ನು ಮುಟ್ಟಬೇಕು. ಯಾರು ಅವಳನ್ನು ಮೊದಲು ಮುಟ್ಟುತ್ತಾರೊ ಅವರು ಅವಳನ್ನು ಮದುವೆಯಾಗುವುದು ಎಂದು ಪಣ ಇಟ್ಟೆವು. ಇತ್ತ ಓಡಿ ಬಂದೆವು. ನೀನು ಅಣ್ಣಾ ಎಂದು ಕರೆದೆ. ನಾವು ತಂಗಿ ಎಂದು ತಿಳಿಯುತ್ತೇವೆ. ನೀನು ಯಾರು? ಎಲ್ಲಿಗೆ ಹೋಗುತ್ತಿರುವೆ?'' ಎಂದು ಕೇಳಿದರು. ಸಿರಿ ತನ್ನ ಕತೆಯನ್ನೆಲ್ಲ ಹೇಳಿದಳು. ''ನಮ್ಮ ಅರಮನೆಗೆ ಬಾ. ನಿನ್ನನ್ನು ತಂಗಿಯಂತೆ ನೋಡಿಕೊಳ್ಳುತ್ತೇವೆ'' ಎಂದರು. '' ಎಲ್ಲ ಗೌರವದಿಂದ ಕರೆದುಕೊಂಡು ಹೋಗುವುದಾದರೆ ಬರುತ್ತೇನೆ'' ಎಂದಳು. ಸೋದರರು ಒಪ್ಪಿ ಹೊರಟರು.

ಎಳೆಯ ಮಗು ಕುಮಾರ ಎದ್ದು ಕುಳಿತ. ಸಿರಿಯ ಬದುಕಿನಲ್ಲಿ ಮುಂದಾಗುವ ಘಟನೆಗಳನ್ನೆಲ್ಲಾ ಹೇಳಿದ. 'ಒಬ್ಬ ತಂದೆಗೆ ಹುಟ್ಟಿ ಇನ್ನೊಬ್ಬನನ್ನು ಅಪ್ಪ ಎಂದು ಕರೆಯಲಾರೆ. ನನ್ನನ್ನು ಮಾಯ ಮಾಡಿ' ಎಂದ. ದಾರು ನನ್ನನ್ನೂ ಮಾಯ ಮಾಡಿ ಎಂದಳು. ಸಿರಿ ಇಬ್ಬರನ್ನೂ ಮಾಯ ಮಾಡಿದಳು.

ಕೊಂಬು ಕಹಳೆ ವಾದ್ಯ ಮೇಳದೊಂದಿಗೆ ಬೋಳದ ಯುವರಾಜರು ಬಂದರು. ಸಿಂಗರಿಸಿದ ಪಲ್ಲಕ್ಕಿ ಹೊತ್ತು ಮೆರವಣಿಗೆ ಬಂದಿತು. ಸಿರಿ ಪಲ್ಲಕ್ಕಿ ಏರಿದಳು. ಬೋವಿಗಳು ಪಲ್ಲಕ್ಕಿ ಹೊತ್ತರು. ಮೆರವಣಿಗೆ ಬೋಳದ ಅರಮನೆಯತ್ತ ಹೊರಟಿತು. ಮುಂಬಾಗಿಲಲ್ಲಿ ಬಂದು ನಿಂತಿತು. ಯುವರಾಜರು 'ತಂಗಿ ಸಿರಿ' ಎಂದು ಕರೆತಂದರು. ಪ್ರೀತಿಯಿಂದ ಉಪಚರಿಸಿದರು. ಅಣ್ಣಂದಿರು ತಂಗಿಯನ್ನು ಅಕ್ಕರೆಯಿಂದ ಕಂಡರು. ಬೋಳದ ಅರಮನೆಯಲ್ಲಿ ಸಿರಿ ಸಂತಸದಿಂದ ಇದ್ದಳು.

ಕೊಟ್ರಪಾಡಿಯ ಅರಸು ಕೊಡ್ಸರ ಆಳ್ವ. ಕೊಡ್ಸರ ಆಳ್ವನೂ ಬೋಳದ ಯುವರಾಜರೂ ಗೆಳೆಯರು. ಒಂದು ದಿನ ಕೊಡ್ಸರ ಆಳ್ವ ಬೋಳದ ಅರಮನೆಗೆ ಬಂದನು. ಸಿರಿಯ ರೂಪವನ್ನು ಕಂಡ, ಮೋಹಗೊಂಡ. ಸಿರಿಯನ್ನು ಮರುಮದುವೆ ಆಗುತ್ತೇನೆ ಎಂದ. ಕೈಭಾಷೆ ಕೊಟ್ಟ.

ಕೊಡ್ಸರ ಆಳ್ವನ ಹೆಂಡತಿ ಸಾಮುವಿಗೆ ಇದು ತಿಳಿಯಿತು. 'ಸಿರಿಯನ್ನು ಮರೆತುಬಿಡಿ' ಎಂದಳು. ''ಸಿರಿಯನ್ನು ಮೆಚ್ಚಿದ್ದೇನೆ. ಕೈಭಾಷೆ ಕೊಟ್ಟಿದ್ದೇನೆ'' ಎಂದ ಆಳ್ವ. ಸಾಮು ಹಠ ಹಿಡಿದಳು. ಆಳ್ವನಿಗೆ ಇಕ್ಕಟ್ಟು. ಕೈ ಹಿಡಿದ ಹೆಂಡತಿಯನ್ನು ತೊರೆಯುವಂತಿಲ್ಲ. ಕೈಭಾಷೆ ಕೊಟ್ಟ ಸಿರಿಯನ್ನು ಮರೆಯುವಂತಿಲ್ಲ. ಹೆಂಡತಿಯನ್ನು ಹೊಡೆದು ಬಡಿದ. ಸಾಮು ತವರಿಗೆ ಹೊರಟು ಹೋಗುವೆ ಎಂದಳು.

ಮರುದಿನ ಆಳ್ವ ಎದ್ದ. ಮಂದಿ ಸೇರಿಸಿದ. ಬೇಟೆಗೆ ಹೋಗುತ್ತೇನೆ ಎಂದು ಹೆಂಡತಿಗೆ ಸುಳ್ಳು ಹೇಳಿದ. ಬೋಳದ ಅರಮನೆಗೆ ಹೊರಟ.

ಬೋಳದ ಅರಮನೆಯಲ್ಲಿ ಸಿರಿಯ ಮದುವೆ ಸಿದ್ಧತೆ ಆಗಿತ್ತು. ಅರಸರು ಆಳ್ವನನ್ನು ಮುಂಬಾಗಿಲಲ್ಲಿ ಎದುರುಗೊಂಡರು. ಆದರದಿಂದ ಉಪಚರಿಸಿದರು.

ಮರುದಿನ ಮುಂಜಾನೆ ಮಂಗಳವಾದ್ಯ ಮೊಳಗಿತು. ಸಿಡಿಮದ್ದು ಸಿಡಿಯಿತು. ಮಂದಿ ಚಪ್ಪರದಲ್ಲಿ ತುಂಬಿದರು. ಸಿರಿ ಸಿಂಗಾರವಾಗಿ ಮದುಮಗಳಾದಳು. ಅರಸರು ಆಳ್ವನಿಗೆ ಸಿರಿಯನ್ನು ಉಡಿಕೆ ಮಾಡಿಕೊಟ್ಟರು. ಮದುವೆಯ ಊಟವಾಯಿತು. ಪಲ್ಲಕ್ಕಿ

ಸಿಂಗಾರವಾಯಿತು. ಸಿರಿ ಪಲ್ಲಕ್ಕಿ ಹತ್ತಿದಳು. ವಾದ್ಯ ವಾಲಗದಲ್ಲಿ ದಿಬ್ಬಣ ಕೊಟ್ರಪಾಡಿಗೆ ಹೊರಟಿತು.

ಅತ್ತ ಸಾಮುಗೆ ಸುದ್ದಿ ತಿಳಿಯುತ್ತದೆ. ದುಃಖದಿಂದ ಪರಿತಪಿಸಿದಳು. ಬಣ್ಣದ ಚಾವಡಿಯಲ್ಲಿ ದೀಪ ಹೊತ್ತಿಸಿ ಇಟ್ಟಳು. ''ಮನೆಗೆ ಬಂದ ಸಿರಿ ಈ ದೀಪ ಕಂಡೊಡನೆ ಅವಳ ಕಣ್ಣು ಕುರುಡಾಗಲಿ'' ಎಂದು ಶಾಪ ಹಾಕಿದಳು. ತವರಿಗೆ ಹೊರಟು ಹೋದಳು. ದಿಬ್ಬಣ ಅರಮನೆ ಸಮೀಪಿಸಿತು. ಸಿರಿ ಬೋವಿಗಳನ್ನು ತಡೆದಳು. ಪಲ್ಲಕ್ಕಿಯಿಂದ ಇಳಿದಳು. ದೇವರ ಮಗಳು ಸಿರಿಗೆ ಸಾಮುವಿನ ಕುತಂತ್ರ ತಿಳಿಯಿತು.

''ನನ್ನ ಅಕ್ಕ ಬರಬೇಕು 'ತಂಗಿ' ಎಂದು ಕರೆಯಬೇಕು, ನನ್ನ ಕೈ ಹಿಡಿದು ಅರಮನೆ ಹೊಗಿಸಬೇಕು, ಇಲ್ಲವಾದರೆ ನಾನು ಬರಲಾರೆ'' ಎಂದಳು. ಆಳ್ವ ಕಂಗೆಟ್ಟ. ಸಾಮುವಿನ ತವರಿಗೆ ಹೋದ. ''ನನ್ನಿಂದ ತಪ್ಪಾಯಿತು. ನನ್ನ ಮಾನವನ್ನು ಉಳಿಸು. ಎಲ್ಲವನ್ನೂ ಮರೆತು ಬಾ'' ಎಂದು ಸಂತೈಸಿದ.

ಸಾಮು ಗಂಡ ಕೊಡ್ಸರ ಆಳ್ವನೊಂದಿಗೆ ಹೊರಟಳು. ಕೊಟ್ರಪಾಡಿ ಅರಮನೆಗೆ ಬಂದಳು. 'ತಂಗಿ' ಎಂದು ಸಿರಿಯ ಕೈ ಹಿಡಿದಳು. ಅರಮನೆಯ ಒಳಗೆ ಕರೆತಂದಳು. ದೇವರಿಗೆ ನಮಿಸಿದರು. ಹೆಂಡಿರಿಬ್ಬರು ಗಂಡನ ಕಾಲಿಗೆರಗಿದರು. ಆಳ್ವ ಮನಸಾರೆ ಹರಸಿದ. ಬರಸೆಳೆದು ನಸುನಕ್ಕ. ನೆರೆದವರು ಸಂತಸಗೊಂಡರು. ಸಿರಿಯನ್ನು ಹರಸಿದರು. ಸಮ್ಮಾನ ಉಂಡು ಹೊರಟರು.

ಸಿರಿ ಹೊಕ್ಕ ಅರಮನೆಯಲ್ಲಿ ಸಂತೋಷ ಹೆಚ್ಚಿತು. ಸಂಪತ್ತು ತುಂಬಿತು. ಸಿರಿ, ಸಾಮು ಜತೆಯಾಗಿ ಆಳ್ವನಿಗೆ ಹೊಂದಿ ಬಾಳಿದರು. ಆಳ್ವನಿಗೆ ಒಬ್ಬಳು ಎಣ್ಣೆ ಹಚ್ಚಿದಳು. ಇನ್ನೊಬ್ಬಳು ಬಿಸಿನೀರು ಎರೆಯುವಳು. ಒಬ್ಬಳು ಅನ್ನ ಇಕ್ಕುವಳು. ಇನ್ನೊಬ್ಬಳು ಸಾರು ಬಡಿಸುವಳು. ಅಕ್ಕ ತಂಗಿ ಹಾಲು ನೀರಿನಂತೆ ಕೂಡಿ ಇದ್ದರು.

ದಿನಗಳು ಕಳೆಯಿತು. ತಂಗಿಯ ಬಗ್ಗೆ ಹೊಟ್ಟೆಕಿಚ್ಚು ಹುಟ್ಟಿತು ಅಕ್ಕನಿಗೆ. ಗಂಡ ಸಿರಿಯನ್ನು ಹೆಚ್ಚು ಪ್ರೀತಿಸುತ್ತಾನೆ ಎಂಬ ಸಂಶಯ ಸಾಮುವಿಗೆ. ಒಂದು ದಿನ

ಸಿರಿ ತಿಂಗಳ ಮುಟ್ಟಾದಳು. ''ಮಿಂದು ಮಡಿಯಾಗಲು ಸೀಗೆಪುಡಿ ಕೊಡಿ ಅಕ್ಕ'' ಎಂದು ಕೇಳಿದಳು. ಅಕ್ಕ ಸಾಮು 'ಸೀಗೆಪುಡಿ ಇಲ್ಲ' ಎಂದು ಸಿಡುಕಿಂದ ಚುಚ್ಚಿ ಆಡಿದಳು. ಸಿರಿ ಮಡಿವಾಳತಿ ಚೆಲುವೆಯನ್ನು ಹೋಗಿ ಕೇಳಿದಳು. ಪಡೆದು ಬಂದಳು. ಹರಿವ ನೀರಲ್ಲಿ ಮಿಂದು ಬಂದಳು.

ಸಿರಿ ಮಿಂದು ಅರಮನೆಗೆ ಬಂದೊಡನೆ ಅಕ್ಕ ಸಾಮು ಮುಟ್ಟಾದಳು. 'ಮಡಿಯಾಗಲು ಸೀಗೆಪುಡಿ ಕೊಡು ಸಿರಿ' ಎಂದಳು. ಸೀಗೆಪುಡಿ ಹಿಡಿದು ಸಾಮು ನದಿಗೆ ಬಂದಳು. ತುಂಬಿ ಹರಿಯುತ್ತಿದ್ದ ನದಿಯಲ್ಲಿ ಅಂದು ಹನಿ ನೀರಿಲ್ಲ. ಸಾಮು ಎಳನೀರು ತರಿಸಿದಳು. ಅದರಲ್ಲೂ ನೀರಿಲ್ಲ. ಸಾಮು ಕಂಗೆಟ್ಟಳು. ಅಣ್ಣ ಬಾಮು ಕಿಲ್ಲೆಗೆ ಆಳು ಕಳುಹಿಸಿದಳು. ನಾನು ಮಿಂದು ಮಡಿಯಾಗಲು ನೀರಿಲ್ಲದಂತೆ ಸಿರಿ ಮಾಡಿದ್ದಾಳೆ ಎಂದು ಅತ್ತಳು. ಬಾಮುಕಿಲ್ಲೆ ಸಿರಿಯನ್ನು ಕರೆಸಿ ವಿಚಾರಿಸಿದ. ಸಿರಿ ಅಕ್ಕ ಮಾಡಿದ್ದನ್ನು ಹೇಳಿದಳು. ''ನೀವು ಅಕ್ಕ ತಂಗಿಯರು, ಒಪ್ಪತಪ್ಪವಾಗಿರಬೇಕು'' ಎಂದು ಬಾಮುಕಿಲ್ಲೆ ಬುದ್ಧಿ ಹೇಳಿದ. ''ಅಕ್ಕಾ ಬನ್ನಿ, ಮಿಂದು ಬನ್ನಿರಿ'' ಎಂದಳು ಸಿರಿ. ಸಾಮು ನದಿಗೆ ನಡೆದಳು. ನದಿಯಲ್ಲಿ ನೀರು ತುಂಬಿ ಹರಿದಿದೆ. ಹರಿವ ನೀರಿನಲ್ಲಿ ಮಿಂದಳು. ಮಡಿಯಾಗಿ ಬಂದಳು. ಅಕ್ಕ ತಂಗಿ ಒಂದಾಗಿ ಬಾಳಿದರು.

ಕೊಟ್ರಪಾಡಿ ಅರಮನೆಯಲ್ಲಿ ಹೊಸ ಸಂಭ್ರಮ ತುಂಬಿತು. ಸಿರಿ ಬಸುರಿಯಾದಳು. ತಿಂಗಳು ತುಂಬಿತು. ಆಳ್ವ, ಸಂತಸದಿಂದ ನಲಿದ. ''ತಂಗಿ ನೀನು ಕೆಲಸ ಮಾಡಬೇಡ. ದಣಿಯಬೇಡ ನಿನ್ನ ಬಯಕೆ ಏನೆಂದು ಹೇಳು'' ಎಂದಳು ಸಾಮು. ಮಮತೆಯಿಂದ ಆರೈಕೆ ಮಾಡಿದಳು.

ಬಸುರಿಗೆ ತಿಂಗಳು ತುಂಬುತ್ತ ಬಂತು. ಸಾಮುವಿನ ತವರಿನವರು ಬಸುರಿ ಸಮ್ಮಾನಕ್ಕೆ ಕರೆದರು. ಅಕ್ಕ ತಂಗಿಯರು ಬಂಗಾರ ತೊಟ್ಟು ಸಿಂಗಾರವಾಗಿ ಹೊರಟರು. ಬಸುರಿಗೆ ಬಗೆಬಗೆಯ ತಿಂಡಿ ತಿನಿಸು ಬಡಿಸಿದರು. ಸಮ್ಮಾನ ಮಾಡಿದರು. ಸಂಜೆ ಅಕ್ಕ ತಂಗಿಯರು ಕೊಟ್ರಪಾಡಿಗೆ ಹೊರಟರು.

ನಡುದಾರಿಯಲ್ಲಿ ನಡೆದು ಬರುವಾಗ ಸಿರಿ ನಿಂತಳು. ''ಅಕ್ಕ ಮುಂದೆ ನಡೆಯಲಾರೆ. ಹೊಟ್ಟೆಯಲ್ಲಿ ತಾಳಲಾರದ ನೋವು'' ಎಂದು ಅಲ್ಲಿಯೇ ಕುಸಿದು

ಕುಳಿತಳು. ಜನ ಸಂಚಾರವಿಲ್ಲ, ಹತ್ತಿರ ಮನೆಗಳಿಲ್ಲ. ಸಾಮು ಕಂಗೆಟ್ಟಳು. ಸಿರಿ ಲೋಕನಾಡು ಬ್ರಹ್ಮನನ್ನು ನಮಿಸಿದಳು. ಅಜ್ಜ ಬಿರುಮ ಆಳ್ವನನ್ನು ಭಕ್ತಿಯಿಂದ ನೆನೆದಳು. ಸುಖದ ಹೆರಿಗೆ ಆಗಲಿ ಎಂದು ಬೇಡಿದಳು. ಗಳಿಗೆಯಲ್ಲಿ ಸಿರಿ ಹಡೆದಳು. ಹೆಣ್ಣುಮಗುವನ್ನು ಹೆತ್ತಳು. ಮಾಯದ ಅಡಿಕೆ ಮರದ ಹಾಳೆಯಲ್ಲಿ ಮಗುವನ್ನು ಮಲಗಿಸಿದಳು. ಮುದ್ದಾದ ಮಗು. ಎತ್ತಿ ಮುತ್ತಿಟ್ಟಳು. ಎದೆಗೆ ಅಪ್ಪಿಕೊಂಡಳು. ಮಗುವಿಗೆ ಸೊನ್ನೆ ಎಂದು ಹೆಸರಿಟ್ಟಳು.

ಸಿರಿ ಮಗುವನ್ನು ಸಾಮುವಿನ ಕೈಗೆ ಇತ್ತಳು. ''ಅಕ್ಕ ನಾನು ಕೊಟ್ರಪಾಡಿಗೆ ಬರಲಾರೆ. ನನ್ನ ಬದುಕು ಕೊನೆಯಾಯಿತು, ನನ್ನ ಮಗ ಕುಮಾರನಿಗೆ ಮಾತು ಕೊಟ್ಟಿದ್ದೇನೆ. ಅದರಂತೆ ನಾನು ಈಗ ಮಾಯವಾಗುತ್ತೇನೆ. ಅವನ ಜೊತೆ ಸೇರುತ್ತೇನೆ. ಈ ಮಗು ಸೊನ್ನೆಯನ್ನು ನಮ್ಮ ಗಂಡನ ಕೈಗೆ ಕೊಡಿ. ಕಾನಬೆಟ್ಟು ಅಜ್ಜ ಚಂದಯ್ಯ ಹೆಗ್ಗಡೆಯವರಿಗೆ ಕೊಡಲು ಹೇಳಿ. ಅವರು ಪ್ರೀತಿಯಿಂದ ಸಾಕಲಿ. ಇದು ನನ್ನ ಕೊನೆಯ ಆಸೆ. ಅಲ್ಲಿಗೆ ನಿಮ್ಮ ಬದುಕು ಕೊನೆಯಾಗಲಿ. ನೀವು ಸತ್ತು ದೈವವಾಗಿ ಒಟ್ಟಾಗೋಣ'' ಎಂದು ಸಿರಿ ಮಾಯವಾದಳು.

ಸಾಮು ಸೊನ್ನೆಯನ್ನು ಎತ್ತಿಕೊಂಡಳು. ಕೊಟ್ರಪಾಡಿ ಅರಮನೆಗೆ ಬಂದಳು. ಗಂಡನಿಗೆ ನಡೆದ ಕತೆಯನ್ನು ಹೇಳಿದಳು. ಮಗುವನ್ನು ಅವನ ಕೈಗೆ ಕೊಟ್ಟಳು. ಅವನ ಕಾಲಿಗೆ ಎರಗಿದಳು. ಅರಮನೆ ಚಾವಡಿ ಇಳಿದು ಅಂಗಳಕ್ಕೆ ಬಂದಳು. ತುಳಸಿಕಟ್ಟೆ ಮುಂದೆ ನಿಂತಳು. ಬ್ರಹ್ಮನನ್ನು ನೆನೆದಳು. ಮಾಯವಾದಳು.

ಆಳ್ವನಿಗೆ ಸಿಡಿಲು ಬಡಿದಂತೆ ಆಯಿತು. ದುಃಖದಿಂದ ಮರುಗಿದ. ಅಳುವ ಮಗುವನ್ನು ಹೆಗಲಿಗಿಟ್ಟು ಮಲಗಿಸಿದ. ಮರುದಿನ ಬೆಳಗ್ಗೆ ಮಗುವನ್ನು ಎತ್ತಿಕೊಂಡ. ಕಾನಬೆಟ್ಟು ಅಜ್ಜರ ಮನೆಗೆ ಬಂದ. ಅಜ್ಜ ಆಳ್ವನನ್ನು ಆದರದಿಂದ ಬರಮಾಡಿಕೊಂಡರು. ಆಳ್ವ ನಡೆದ ಸಂಗತಿಯನ್ನೆಲ್ಲ ವಿವರಿಸಿದ. ಮಗು ಸೊನ್ನೆಯನ್ನು ಅಜ್ಜರಿಗೆ ಒಪ್ಪಿಸಿದ.

ಅಜ್ಜ ಅತಿಸಂತೋಷದಿಂದ ಮಗುವನ್ನು ಎತ್ತಿಕೊಂಡರು. ಅಪ್ಪಿ

ಮುದ್ದಾಡಿದರು. ತೊಟ್ಟಿಲು ಕಟ್ಟಿದರು. ತೂಗಿ ಮಲಗಿಸಿದರು. ತುತ್ತು ತಿನ್ನಿಸಿದರು ಎತ್ತಿ ಆಡಿಸಿದರು. ಪ್ರೀತಿಯಿಂದ ಸಲಹಿದರು.

* * *

ನಂದಳಿಕೆ ತುಳುನಾಡಿನ ಪುಟ್ಟ ಹಳ್ಳಿ. ಮಹಾಲಿಂಗೇಶ್ವರ ಊರ ದೇವರು ದೇವಾಲಯದಲ್ಲಿ ಜಾತ್ರೆ ನಡೆಯುತ್ತದೆ. ಊರು ನೆರೆವೂರಿನಿಂದ ಸಾವಿರಾರು ಭಕ್ತರು ಜಾತ್ರೆಗೆ ಬಂದರು.

ನಂದಳಿಕೆಯ ಪಕ್ಕದ ಊರು ಬೆಳಮಣ್ಣು. ಅಲ್ಲಿ ಮಡುಕುಭಟ್ಟರ ಮನೆ ಬಹಳ ಹೆಸರುವಾಸಿ. ಭಟ್ಟರ ಮಡದಿ ಚಂದ್ರಾವತಿ ತುಂಬಿದ ಬಸುರಿ. ದಂಪತಿಗಳು ನಂದಳಿಕೆ ಜಾತ್ರೆಗೆ ಹೋದರು. ಪೂಜೆ, ಊಟ ಎಲ್ಲ ಮುಗಿಯಿತು. ಬಂದ ಭಕ್ತರು ತಮ್ಮ ತಮ್ಮ ಮನೆಗಳಿಗೆ ಹೊರಟರು. ಭಟ್ಟ ದಂಪತಿಗಳೂ ಹೊರಟರು. ಬೋಳದ ಉಪ್ಪಳಿಗೆ ಕಾಡಿನ ದಾರಿಯಾಗಿ ನಡೆದರು. ಬಸುರಿ ನಡೆದು ಆಯಾಸಗೊಂಡಳು. ದಣಿವು ಕಳೆಯಲು ಒಂದು ದೊಡ್ಡ ಉಪ್ಪಳಿಗೆ ಮರದ ನೆರಳಲ್ಲಿ ಕುಳಿತಳು. ಕತ್ತೆತ್ತಿ ಕಂಡಳು ಹಸುರು ಹಸುರಾದ ದೊಡ್ಡ ದೊಡ್ಡ ಎಲೆಗಳು. ಬಸುರಿಗೆ ಬಯಕೆಯಾಯಿತು. ಉಪ್ಪಳಿಗೆ ಎಲೆಯ ಕಡುಬು ತಿನ್ನಬೇಕು ಎಂದು. ಆಸೆಯನ್ನು ಗಂಡನಿಗೆ ಹೇಳಿದಳು. ಕತ್ತಲಾಯಿತು ಎಂದು ಇಬ್ಬರೂ ಮನೆಗೆ ಬಂದರು. ಕಡುಬಿನ ಆಸೆಯಲ್ಲೇ ಬಸುರಿ ರಾತ್ರಿ ಕಳೆದಳು.

ಮರುದಿನ ಮನೆ ಆಳು ಕರಿಯನನ್ನು ಕರೆದಳು. ''ಉಪ್ಪಳಿಗೆ ಕಾಡಿಗೆ ಹೋಗಿ ಎಲೆ ಕಿತ್ತು ತಾ. ಕಡುಬು ಮಾಡಿ ತಿನ್ನಬೇಕು'' ಎಂದಳು. ಕರಿಯ ಉಪ್ಪಳಿಗೆ ಕಾಡಿಗೆ ಬಂದ. ಆ ದೊಡ್ಡ ಮರವನ್ನು ಹತ್ತಿದ. ಎಲೆಗಳನ್ನು ಕೀಳಲು ತೊಡಗಿದ. ಅಷ್ಟರಲ್ಲಿ ಹುಲಿಯ ಕೂಗು ಕೇಳಿಸಿತು. ದೊಡ್ಡ ಹುಲಿಯೊಂದು ಮರದ ಬುಡದಲ್ಲಿ ನಿಂತಿದೆ. ಕರಿಯನ ಮೈ ಬೆವರಿತು. ಕೈ ಕಾಲು ನಡುಗಿತು. ಎದೆ ಡಬಡಬ ಬಡಿಯಿತು. 'ದಯವಿಟ್ಟು ಹೊರಟು ಹೋಗು' ಕರಿಯ ಹುಲಿಯನ್ನು ಬೇಡಿದ. ಆಗ ಹುಲಿ ಹೇಳಿತು 'ನೀನು ಯಾರಿಗೆ ಈ ಎಲೆ ತೆಗೆದುಕೊಂಡು ಹೋಗುತ್ತಿಯೋ ಅವಳು ಹೆತ್ತ ಮಗುವನ್ನು ನನಗೆ ಕೊಡಬೇಕು. ಹಾಗಿದ್ದರೆ ಎಲೆ ಕೀಳು. ಇಲ್ಲವಾದರೆ ಎಲೆ ಮುಟ್ಟಬೇಡ''. ಕರಿಯ ಒಡತಿಯನ್ನು ಕೇಳಿ ಬರುತ್ತೇನೆ ಎಂದ. ಕರಿಯ ಮರ ಇಳಿದ. ಮನೆಗೆ ಬಂದ. ಒಡತಿ

ಬಾಗಿಲಲ್ಲೇ ಕಾದಿದ್ದಳು. ಏಕೆ ಎಲೆ ತರಲಿಲ್ಲ ಎಂದು ಕೇಳಿದಳು. ಕರಿಯ ನಡೆದ ಸಂಗತಿಯನ್ನು ಹೇಳಿದ. ಒಡತಿ ಯೋಚಿಸಿದಳು. ಹೊತ್ತು ಹೆತ್ತು ಸಾಕಿದ ಮಗುವನ್ನು ಹುಲಿಗೆ ಹೇಗೆ ಕೊಡುವುದು? ಬಯಕೆ ತೀರದೆ ಹೆರಿಗೆ ಸುಖವಾಗದು! ದೊಡ್ಡ ಕಷ್ಟ ಬಂತಲ್ಲ! ಎಲೆಯ ಮೇಲೆ ಆಸೆ. ಮಗುವಿನ ಮೇಲೆ ಪ್ರೀತಿ. ಹುಲಿಯ ಬಗ್ಗೆ ಭೀತಿ. ಚಿಂತಿಸಿದಳು. ಕಡುಬಿನ ಆಸೆ ಹೆಚ್ಚಿತು. ಈಗ ಎಲೆ ಬರಲಿ. ಕಡುಬು ತಿಂದಾಗಲಿ. ಹೆರಿಗೆ ಆಗಲಿ. ಮತ್ತೆ ಮಗುವನ್ನು ಹುಲಿಗೆ ಕೊಡುವ ಮಾತು. ಆಗ ನೋಡೋಣ ಎಂದುಕೊಂಡಳು.

"ಕರಿಯ ಹಡೆದ ಮಗುವನ್ನು ಕೊಡುತ್ತೇನೆ, ಹುಲಿಗೆ ಹೇಳು, ಎಲೆ ಕಿತ್ತು ತಾ" ಎಂದಳು. ಕರಿಯ ಮತ್ತೆ ಕಾಡಿಗೆ ಓಡಿದ. ಹುಲಿ ಕಾದಿತ್ತು. "ಒಡತಿ ಒಪ್ಪಿದ್ದಾರೆ. ಹಡೆದ ಮಗುವನ್ನು ನಿನಗೆ ಕೊಡುತ್ತಾರೆ. ಎಲೆ ಕೀಳಲು ಬಿಡು" ಎಂದ. ಹುಲಿ ಒಪ್ಪಿತು ಹೊರಟು ಹೋಯಿತು.

ಕರಿಯ ಎಲೆಗಳನ್ನು ಕಿತ್ತ, ಮನೆಗೆ ತಂದ. ಒಡತಿಗೆ ಕೊಟ್ಟ. ಚಂದ್ರಾವತಿ ಕಡುಬು ಮಾಡಿದಳು. ಹೊಟ್ಟೆ ತುಂಬ ತಿಂದಳು. ಬಯಕೆ ತೀರಿತು. ಆ ರಾತ್ರಿಯೇ ಬಸುರಿಗೆ ಬೇನೆ ಕಾಣಿಸಿತು. ಸೂಲಗಿತ್ತಿಯನ್ನು ಕರೆಸಿದರು. ಊರ ದೇವರಿಗೆ ಹರಕೆ ಹೇಳಿಕೊಂಡರು. ಬೇನೆ ಕಳೆಯಿತು. ಹೆರಿಗೆ ಸುಖವಾಯಿತು. ಹೆಣ್ಣುಮಗುವನ್ನು ಹೆತ್ತಳು.

ಹೆತ್ತು ಹತ್ತು ದಿನ ಕಳೆಯಿತು. ಹನ್ನೊಂದನೆಯ ದಿನ ಶುದ್ಧವಾಯಿತು. ಮಗುವಿಗೆ ಗಿಂಡೆ ಎಂದು ಹೆಸರಿಟ್ಟರು. ದಿನ, ತಿಂಗಳು ಕಳೆಯಿತು. ವರ್ಷ ತುಂಬಿತು. ಮಗು ಪುಟ್ಟ ಪುಟ್ಟ ಹೆಜ್ಜೆ ಇಟ್ಟು ನಡೆಯಿತು. ಹೆತ್ತವರು ಹುಲಿಗೆ ಕೊಟ್ಟ ಮಾತನ್ನು ಮರೆತರು. ಮಗುವಿಗೆ ಮೂರು ವರ್ಷ ತುಂಬಿತು.

ಒಂದು ದಿನ ಭಟ್ಟರು ಪೂಜೆ ಮಾಡುತ್ತಿದ್ದರು. ಹೆಂಡತಿ ಅಡುಗೆ ಮಾಡುತ್ತಿದ್ದಳು. ಮಗು ಗಿಂಡೆ ಮೊಗಸಾಲೆಯಲ್ಲಿ ಆಡುತ್ತಿತ್ತು. ಅಲ್ಲಿಂದ ಅಂಗಳಕ್ಕೆ ಇಳಿಯಿತು. ಹೊರ ಬಾಗಿಲಿಗೆ ಓಡಿತು. ಹುಲಿ ಕಾದಿತ್ತು. ಮಗುವನ್ನು ಎತ್ತಿಕೊಂಡು ಹೋಯಿತು.

ಗಂಡ ಹೆಂಡಿರು ಮಗುವನ್ನು ಕರೆದರು. ಮನೆ ಎಲ್ಲಾ ಹುಡುಕಿದರು. ಕೇರಿ ಎಲ್ಲಾ ಸುತ್ತಿದರು. ಕೆರೆ ಬಾವಿ ಇಳಿದು ಕಂಡರು. ಎಲ್ಲೂ ಮಗು ಕಾಣಲಿಲ್ಲ. ಸುಳಿವು ಸಿಗಲಿಲ್ಲ. ದಂಪತಿಗಳು ದುಃಖಗೊಂಡರು, ವಿಧಿಯನ್ನು ಹಳಿದರು.

ಊರ ಹೆಂಗಸರು ತರಗೆಲೆ ತರಲು ಕಾಡಿಗೆ ಹೊರಟರು. ಉಪ್ಪಳಿಗೆ ಕಾಡಿಗೆ ಬಂದರು. ಮಗು ಅಳುವ ಸದ್ದು ಕೇಳಿಸಿತು. ಅಳು ಕೇಳುವ ಕಡೆಗೆ ನಡೆದರು. ಉಪ್ಪಳಿಗೆ ಮರದ ಬುಡದಲ್ಲಿ ಮಗು ಅಳುತ್ತಿತ್ತು. ಮಗುವನ್ನು ಎತ್ತಿಕೊಳ್ಳಲು ಹೋದರು. ಅಲ್ಲೇ ಮಲಗಿದ್ದ ಹುಲಿ ಕೂಗಿತು. ಭಯದಿಂದ ಓಡಿ ಬಂದರು. ಕಾನಬೆಟ್ಟು ಅಜ್ಜರಿಗೆ ಸುದ್ದಿ ತಂದರು.

ಅಜ್ಜರು ಒಕ್ಕಲ ಮಂದಿಯ ಜತೆಗೂಡಿ ಕಾಡಿಗೆ ಬಂದರು. ಹುಲಿಗೆ ಕೈ ಮುಗಿದು ನಿಂತರು ''ದಯಮಾಡಿ ಮಗುವನ್ನು ಕೊಡು. ಪ್ರೀತಿಯಿಂದ ಸಾಕುತ್ತೇನೆ'' ಎಂದು ಬೇಡಿದರು. ಒಡನೆಯೆ ಹುಲಿ ಹೊರಟು ಹೋಯಿತು. ಮಗು ಹೊನ್ನ ಗೊಂಬೆಯಂತಿತ್ತು ಅಜ್ಜ ಮಗುವನ್ನು ಎತ್ತಿಕೊಂಡರು. ಅಪ್ಪಿ ಮುದ್ದಾಡಿದರು. ಅರಮನೆಗೆ ತಂದರು.

ಸೊನ್ನೆ, ಗಿಂಡೆಯರನ್ನು ಅಜ್ಜ ಕೊಂಡಾಟದಿಂದ ಸಾಕಿದರು. ಪ್ರೀತಿಯಿಂದ ಸಲಹಿದರು. ಮಮತೆಯಿಂದ ಬೆಳೆಸಿದರು. ಸೊನ್ನೆ-ಗಿಂಡೆ ಅಕ್ಕತಂಗಿಯರಾಗಿ ಒಂದಾಗಿ ನಡೆದರು.

ಕಾನಬೆಟ್ಟು ಅಜ್ಜರಿಗೆ ಎರಡು ಮಕ್ಕಳಿದ್ದಾರೆ. ಮುದ್ದಾದ ಬಾಲೆಯರು. ಹೊನ್ನ ಬಣ್ಣದ ಚೆಲುವೆಯರು ಎಂದು ಊರೂರು ಸುದ್ದಿಯಾಯಿತು. ಮಂದಿ ಬಂದು ನೋಡಿದರು. ಸುದ್ದಿ ಮಡುಕಭಟ್ಟರ ಮನೆಗೂ ಮುಟ್ಟಿತು. ಭಟ್ಟ ದಂಪತಿಗಳು ಬಂದರು. ಗಿಂಡೆಯನ್ನು ಕಂಡರು. 'ಗಿಂಡೆ' ಎಂದು ಕರೆದರು. ಅಪ್ಪಿ ಮುದ್ದಾಡಿದರು. ಅಜ್ಜರಿಗೆ ಅಚ್ಚರಿಯಾಯಿತು. ಮಗು ಮನೆಯಿಂದ ಕಾಣೆಯಾದ ಸಂಗತಿಯನ್ನು ದಂಪತಿಗಳು ವಿವರಿಸಿದರು. ಅಜ್ಜ ಗಿಂಡೆಯನ್ನು ಕಾಡಿನಿಂದ ತಂದ ವಿಚಾರ ಹೇಳಿದರು.

“ಅಜ್ಜಾ, ಮಗುವನ್ನು ಕೊಡುವಿರಾ?” ತಾಯಿ ಕೇಳಿದಳು.

“ದೇವರ ಇಷ್ಟ ಇದ್ದಂತೆ ಆಗಲಿ. ಒಂದು ತಟ್ಟೆಯಲ್ಲಿ ಹಾಲನ್ನ ಇಡುತ್ತೇನೆ, ಇನ್ನೊಂದು ತಟ್ಟೆಯಲ್ಲಿ ಉಪ್ಪನ್ನ ಇಡುತ್ತೇನೆ. ಹಾಲನ್ನು ಉಂಡರೆ ಮಗು ನನ್ನದು, ಉಪ್ಪನ್ನ ಉಂಡರೆ ನಿಮ್ಮದು” ಎಂದರು. ದಂಪತಿಗಳು ಒಪ್ಪಿದರು. ಮಗು ಹಾಲನ್ನ ಉಂಡಿತು. ಅಜ್ಜರ ಮನೆಯಲ್ಲಿ ಉಳಿಯಿತು.

ಸೊನ್ನೆಗೆ ವರ್ಷ ಹನ್ನೆರಡು ಆಯಿತು. ಚೆಲವು ಮೈತುಂಬಿ ಬೆಳೆಯಿತು. ಅಜ್ಜ ಮದುವೆ ಮಾಡಲು ಯೋಚಿಸಿದರು. ಉರುಕಿ ತೋಟ ಅರಮನೆಯಲ್ಲಿ ಗುರುಮಾರ್ಲ ಅರಸ. ಅಣ್ಣ ಜಾರುಮಾರ್ಲ. ತಮ್ಮನಿಗೆ ಸೊನ್ನೆಯ ಸಂಬಂಧ ಬಯಸಿ ಬಂದರು. ಅಣ್ಣ ತಮ್ಮ ಅಜ್ಜರ ಅರಮನೆಗೆ ಬಂದರು. ಮಾತು ಸರಿಯಾಯಿತು. ಸೊನ್ನೆಯ ಮದುವೆ ನಿಶ್ಚಯವಾಯಿತು.

ಕಾನಬೆಟ್ಟು, ಉರುಕಿತೋಟ ಅರಮನೆಗಳಲ್ಲಿ ಸೊನ್ನೆಯ ಮದುವೆಗೆ ಸನ್ನಾಹ ವಾಯಿತು. ಮದುಮಗಳು ಸೊನ್ನೆಗೆ ಮಂಗಳಸ್ನಾನ ಮಾಡಿಸಿದರು. ಬಣ್ಣ ಬಣ್ಣದ ಆಭರಣ ತೊಡಿಸಿದರು. ಮಲ್ಲಿಗೆಯ ಜಲ್ಲಿ ಬಿಟ್ಟರು. ಪಟ್ಟೆಸೀರೆ ಉಡಿಸಿದರು. ದಿಬ್ಬಣ ಉರುಕಿತೋಟ ಅರಮನೆಗೆ ಹೊರಟು ಬಂದಿತು. ಎಲ್ಲ ಸಡಗರ ಮರ್ಯಾದೆಯೊಂದಿಗೆ ದಿಬ್ಬಣವನ್ನು ಎದುರುಗೊಂಡರು. ಸಂಪ್ರದಾಯದಂತೆ ಅಜ್ಜ ಗುರುಮಾರ್ಲನಿಗೆ ಸೊನ್ನೆಯನ್ನು ಧಾರೆ ಎರೆದು ಕೊಟ್ಟರು.

ಉರುಕಿತೋಟ ಅರಮನೆಯಲ್ಲಿ ಸಕಲ ಸಂಪತ್ತು ಇತ್ತು. ಸೊನ್ನೆ - ಮಾರ್ಲರ ಸುಖ ಸಂಸಾರ ಸಾಗಿತ್ತು. ಸೊನ್ನೆಗೆ ಹದಿನಾರು ತುಂಬಿತು. ಇಪ್ಪತ್ತು ಬಂದಿತು. ಸೊನ್ನೆ ಮೈನೆರೆಯಲೆ ಇಲ್ಲ. ಗಂಡ ಹೆಂಡಿರ ಮನದಲ್ಲಿ ಚಿಂತೆ ಹುಟ್ಟಿತು. ಕಂಡವರು ಅಪಹಾಸ್ಯ ಮಾಡತೊಡಗಿದರು.

ಇತ್ತ ಗಿಂಡೆಗೆ ಹನ್ನೆರಡು ತುಂಬಿತು. ಕಾನಬೆಟ್ಟು ಅಜ್ಜರ ಅರಮನೆಯಲ್ಲಿ ಗಿಂಡೆ ಮೈನೆರೆದಳು. ತಂಗಿ ಗಿಂಡೆ ಮೈನೆರೆದ ಸುದ್ದಿ ಕೇಳಿ ಸೊನ್ನೆ ನಲಿದಳು. ನಾಲ್ಕನೆಯ

ದಿನ ನೀರಹಬ್ಬ. ಅಜ್ಜ ಎಲ್ಲ ಸನ್ನಾಹ ಮಾಡಿದರು. ಊರ, ಪರವೂರ ಹೆಂಗಸರಿಗೆ ಹೇಳಿಕೆ ಮಾಡಿದರು. ಆದರೆ ಸೊನ್ನೆಗೆ ಕರೆ ಬರಲಿಲ್ಲ. ಸೊನ್ನೆ ಕಾದಳು. ಕಾತರಳಾದಳು. ಅಜ್ಜರಿಗೆ ಮುದಿತನದ ಮರೆವು ಇರಬೇಕು. ನೀರಹಬ್ಬಕ್ಕೆ ನಾನು ಹೋಗುವುದೇ ಸರಿ ಎಂದುಕೊಂಡಳು. ಗಂಡನನ್ನು ಕೇಳಿದಳು. ''ಇಂದು ಗಿಂಡೆಯ ನೀರಹಬ್ಬ. ನಾನು ಹೋಗಿ ಬರಲೆ?'' ''ಕರೆಯದೇ ಹೋಗುವುದು ಮರ್ಯಾದೆಗೆ ಕುಂದು'' ಗಂಡ ಹೇಳಿದ.

''ಇರುವವಳು ನನಗೆ ಒಬ್ಬಳೇ ತಂಗಿ. ಇಂದು ಅವಳ ನೀರಹಬ್ಬ. ನಾನು ಹೋಗದೆ ಇದ್ದರೆ ಹೇಗೆ? ಅಜ್ಜರಿಗೆ ಮರೆವು ಇರಬೇಕು, ಇಲ್ಲ ಏನೋ ತೊಂದರೆ ಆಗಿರಬೇಕು. ಇಲ್ಲದಿದ್ದರೆ ಅಜ್ಜ ನನ್ನನ್ನು ಕರೆಯದೆ ಇರಲಾರರು'' ಎಂದು ನುಡಿದಳು.

''ನೀನಿನ್ನೂ ಹೆಂಗಸಾಗಿಲ್ಲ ಎಂದು ಊರವರು ಹಂಗಿಸುತ್ತಾರೆ. ತಂಗಿಯ ನೀರಹಬ್ಬಕ್ಕೆ ಹೋದರೆ ನಿನ್ನ ಎದುರೆ ನಕ್ಕು ನಗೆಯಾಡಬಹುದು, ನಮ್ಮ ಮಾನ ಹೋದೀತು'' ಎಂದು ಮತ್ತೆ ಹೇಳಿದ.

''ಗಿಂಡೆಗೆ ಇರುವವಳು ನಾನೊಬ್ಬಳೆ ಅಕ್ಕ. ನಾನು ಹೋಗದಿದ್ದರೆ ತಂಗಿ ನೊಂದುಕೊಂಡಾಳು. ಅಜ್ಜ ದುಃಖಪಟ್ಟಾರು. ಊರವರು ಏನೇ ಆಡಿಕೊಳ್ಳಲಿ, ನಿಮ್ಮ ಮಾನಕ್ಕೆ ಕುಂದು ತರಲಾರೆ. ಹಾಗೇನಾದರೂ ಆದರೆ ಕೂಡಲೇ ಹೊರಟು ಬರುತ್ತೇನೆ'' ಎಂದು ಹಟ ಹಿಡಿದಳು.

''ಆಯಿತು, ಹೋಗಿ ಬಾ, ಅವಮಾನವಾಗಿ ಬಂದರೆ ಅದು ನಮ್ಮ ಮಾನಕ್ಕೆ ಹಾನಿ. ಹಸು ಮೇಯಿಸಲು ಕಳುಹಿಸುತ್ತೇನೆ. ಸೆಗಣಿ ಹೆಕ್ಕಿಸುತ್ತೇನೆ. ಹೊರಗಿನ ಚಾಕರಿ ಮಾಡಿಸುತ್ತೇನೆ'' ಎಂದ ಗಂಡ ಗುರುಮಾರ್ಲ.

ಸೊನ್ನೆ ತಲೆ ಬಾಚಿದಳು. ಜಡೆ ಕಟ್ಟಿದಳು. ಬಾಚಿದ ಜಡೆಗೆ ಹೂ ದಂಡೆ ಇಟ್ಟಳು. ಪಟ್ಟೆ ಸೀರೆ ಉಟ್ಟಳು. ಮಿಂಚುವ ಆಭರಣ ತೊಟ್ಟಳು. ಗಂಡನಿಗೆ ನಮಸ್ಕಾರ ಮಾಡಿದಳು. ಸಿಂಗಾರದ ಪಲ್ಲಕ್ಕಿ ಏರಿದಳು. ಕಾನಬೆಟ್ಟು ಅರಮನೆಗೆ ಬಂದಳು.

ಅಕ್ಕನನ್ನು ಕಂಡು ಗಿಂಡೆಯ ಆತಂಕ ಕಳೆಯಿತು. ಸಂತಸ ಉಕ್ಕಿತು. ಇಬ್ಬರೂ ತಬ್ಬಿಕೊಂಡರು. ನೆರೆದಿದ್ದ ಹೆಂಗಸರು ಮನೆ ಬಿಟ್ಟು ನಡೆದರು. ಮಾವಿನ ಕಟ್ಟೆಯಲ್ಲಿ ಬಂದು ಕುಳಿತರು. ''ಆ ಬಂಜೆ ಗೊಡ್ಡು ದಡ್ಡೆ ಸೊನ್ನೆ ಬಂದಿದ್ದಾಳೆ. ಅವಳು ಇದ್ದಲ್ಲಿ ನಾವು ಇರುವುದಿಲ್ಲ. ನೀರು ಮುಟ್ಟುವುದಿಲ್ಲ. ಅವಳು ಹಿಂದಿರುಗಿ ಹೋಗಬೇಕು. ಇಲ್ಲದಿದ್ದರೆ ನಾವು ಹೋಗುತ್ತೇವೆ'' ಎಂದು ಹಟ ಹಿಡಿದರು.

ಇದನ್ನು ತಿಳಿದ ಸೊನ್ನೆ ಅರಮನೆಯಿಂದ ಹೊರಟಳು. ತಂಗಿ ಗಿಂಡೆ ಅಕ್ಕನನ್ನು ತಡೆದಳು. ಅಕ್ಕ ಬುದ್ಧಿಮಾತು ಹೇಳಿ ಸಂತೈಸಿದಳು. ಹೊರಟು ಕೆರೆಯ ದಾರಿಯಲ್ಲಿ ಅಡಗಿ ಕುಳಿತಳು. ನೀರ ಹಬ್ಬಕ್ಕೆ ಕೆರೆಗೆ ಹೊರಟ ತಂಗಿ ಗಿಂಡೆಯನ್ನು ಮಾಯ ಮಾಡಿದಳು.

ಸೊನ್ನೆ ಉರುಕಿತೋಟ ಅರಮನೆಗೆ ಬಂದಳು. ಭಾವ ಜಾರುಮಾರ್ಲನಿಗೆ ಓಲೆ ಬರೆದಳು. ಕರೆ ಕಳುಹಿಸಿದಳು. ಚಾವಡಿಯ ಕಂಬಕ್ಕೆ ಒರಗಿ ಮಲಗಿದಳು. ಗಂಡ ಗುರುಮಾರ್ಲ, ಭಾವ ಜಾರುಮಾರ್ಲರು ಬಂದರು. ''ಏನು ಕಾರಣ''ಕೇಳಿದರು. ಸೊನ್ನೆ ನಡೆದುದನ್ನು ಹೇಳಿದಳು.

ಸೊನ್ನೆ ಮೆಲ್ಲನೆ ಎದ್ದಳು. ಮಿಂದು ಮಡಿಯುಟ್ಟು ಬಂದಳು. ಅಣ್ಣ ತಮ್ಮಂದಿರು ಮಿಂದು ಬಂದರು. ಮೂವರೂ ತುಳಸಿಕಟ್ಟೆಗೆ ಸುತ್ತು ಬಂದರು. ಸೊನ್ನೆ ಸಿರಿಯನ್ನು ನೆನೆದಳು. ಬ್ರಹ್ಮನನ್ನು ನಮಿಸಿದಳು.

''ಮುಜಿಲೊಟ್ಟೆ ಉರಿಬ್ರಹ್ಮರ ಗುಡಿಗೆ ನನ್ನ ಮೂಗುತಿ ಅಳಿಸಿ ಮುಗುಳಿ ಇಡಿಸುತ್ತೇನೆ. ಕೈಬಳೆ ಅಳಿಸಿ ಕಂಕಣ ಕಟ್ಟಿಸುತ್ತೇನೆ. ಕರಿಮಣಿ ಅಳಿಸಿ ಬಲಿಮಂಟಪ ಮಾಡಿಸುತ್ತೇನೆ. ನಾನು ವಾರದಲ್ಲಿ ಮೈನೆರೆಯಬೇಕು. ಮೂರು ತಿಂಗಳಲ್ಲಿ ಬಸುರಿಯಾಗಬೇಕು ಎಂದು ಕೈ ಮುಗಿದಳು. ಹರಕೆ ಹೇಳಿದಳು. ಮುಡಿಪು ಕಟ್ಟಿದಳು.

ಮೂರನೆಯ ದಿನ ಸೊನ್ನೆ ಮೈನೆರೆದಳು. ಹರುಷದ ಸುದ್ದಿ ಕೇಳಿ ಅರಸರು ಸಂತಸಗೊಂಡರು. ಕಾನಬೆಟ್ಟು ಅಜ್ಜರಿಗೆ ಸುದ್ದಿ ತಿಳಿಸಿದರು. ನೀರ ಹಬ್ಬಕ್ಕೆ ಬರಬೇಕು

ಎಂದು ಸುತ್ತಿನ ಊರಿಗೆ ಕರೆ ಕಳುಹಿಸಿದರು. ಸೊನ್ನೆ ಸುಳ್ಳು ಸುದ್ದಿ ಹಬ್ಬಿಸಿದ್ದಾಳೆ ಎಂದು ಜನ ಅಪಹಾಸ್ಯ ಮಾಡಿದರು. ನೀರಹಬ್ಬಕ್ಕೆ ಬರಲಿಲ್ಲ.

ಮತ್ತೆರಡು ತಿಂಗಳಲ್ಲಿ ಸೊನ್ನೆ ಬಸುರಿಯಾದಳು. ಸೀಮಂತ ನಡೆಯಿತು. ಬಗೆ ಬಗೆಯ ತಿಂಡಿ ತಿನಿಸು ಬಡಿಸಿದರು. ಸಮ್ಮಾನ ಮಾಡಿದರು.

ದಿನ ಕಳೆಯಿತು. ಹೆರಿಗೆ ನೋವು ಕಾಣಿಸಿತು. ಸೊನ್ನೆ ಬ್ರಹ್ಮನನ್ನು ನೆನೆದಳು. ಹರಕೆ ಹೇಳಿದಳು. ಮುಡಿಪು ಕಟ್ಟಿದಳು. ಬೇನೆ ಕಳೆಯಿತು. ಸೊನ್ನೆ ಅವಳಿ ಹೆಣ್ಣು ಮಕ್ಕಳನ್ನು ಹಡೆದಳು. ಅಬ್ಬಗ ದಾರಗ ಎಂದು ಹೆಸರಿಟ್ಟು ಕರೆದರು. ಜೋಡು ತೊಟ್ಟಿಲು ಕಟ್ಟಿ ಜೋಗುಳ ಹಾಡಿದರು.

ಅವಳಿ ಮಕ್ಕಳ ಬಾಲಲೀಲೆಯಲ್ಲಿ ದಂಪತಿಗಳು ಮೈಮರೆತರು. ಹೊತ್ತ ಹರಕೆ ಮರೆತರು. ಪುಟ್ಟ ಪುಟ್ಟ ಹೆಜ್ಜೆ ಇಟ್ಟ ಮಕ್ಕಳು ಮೈತುಂಬಿ ಬೆಳೆದರು. ದಿನ, ವರ್ಷ ಉರುಳಿ ಹನ್ನೆರಡು ತುಂಬಿತು.

ಕಡೆರಿ ಕಾರ್ಕಳದ ಚಂದ್ರಮ ಶೆಟ್ಟರು ಸಂಬಂಧ ಬಯಸಿದರು. ಉರುಕಿತೋಟ ಅರಮನೆಗೆ ಬಂದರು. ಅಬ್ಬಗ ದಾರಗರನ್ನು ತಮ್ಮ ಅವಳಿ ಮಕ್ಕಳಿಗೆ ಕೊಡಬೇಕೆಂದು ಕೇಳಿದರು. ಮಾತು ಸರಿಯಾಯಿತು. ಭಟ್ಟರನ್ನು ಕರೆಸಿದರು. ಮದುವೆ ದಿನ ಗಳಿಗೆ ಇಡಿಸಿದರು.

ಮದುವೆಯ ಸಂತಸ ಮನೆ ತುಂಬಿತು. ಊರು ಹರಡಿತು. ಬಳಗವನ್ನು ಮದುವೆಗೆ ಕರೆಯಲು ಸೊನ್ನೆ, ಗುರುಮಾರ್ಲರು ಹೊರಟರು. ದಾರಿ ನಡೆದರು. ದಾರಿ ನಡೆದು ದಣಿದರು. ಸೊನ್ನೆ ಬಸವಳಿದಳು. ಮುಂದೊಂದು ಗೋಳಿ ಕಟ್ಟೆ ಕಂಡಿತು. ದಂಪತಿಗಳು ಕಟ್ಟೆ ಹತ್ತಿ ಮರಕ್ಕೆ ಒರಗಿದರು. ಮುದುಕ ಬ್ರಾಹ್ಮಣನೊಬ್ಬ ಕಟ್ಟೆ ಬಳಿ ಬಂದ. ಸತಿಪತಿಯರು ಎದ್ದು ನಮಿಸಿದರು. ಬ್ರಾಹ್ಮಣ ತಾನು ಜೋಯಿಸ ಎಂದು ಪರಿಚಯ ಹೇಳಿದ. ಸೊನ್ನೆ ತಮ್ಮ ಕುಟುಂಬದ ಭವಿಷ್ಯ ಹೇಳು ಎಂದಳು. ಬ್ರಾಹ್ಮಣ

ಪಂಚಾಂಗ ಬಿಡಿಸಿದ. ಗುಣಿಸಿ ಲೆಕ್ಕಾಚಾರ ಮಾಡಿದ. ಸೊನ್ನೆ, ಕೊಟ್ಟ ಮಾತು ತಪ್ಪಬಾರದು. ಹೇಳಿದ ಹರಕೆ ಮರೆಯಬಾರದು. ಹೆರುವ ಮುನ್ನ ಹೇಳಿಕೊಂಡ ಹರಕೆ ಬಾಕಿ ಇದೆ ಹರಕೆ ಸಲ್ಲಿಸಿದ ಹೊರತು ಮದುವೆಗೆ ತೊಂದರೆ ಕಾಣುತ್ತದೆ'' ಎಂದ. ಸೊನ್ನೆಗೆ ಸಿಟ್ಟು ಏರಿತು. ಬ್ರಾಹ್ಮಣನನ್ನು ಬೈದಳು.

''ಸತ್ಯ ಧರ್ಮ ಬಿಟ್ಟು ನಡೆಯಬೇಡಿ'' ಎಂದ ಬ್ರಾಹ್ಮಣ ಹೊರಟು ಹೋದ. ಸೊನ್ನೆ ಮಾರ್ಲರು ತಮ್ಮ ಕೆಲಸಕ್ಕೆ ಮುಂದು ನಡೆದರು.

ಬ್ರಾಹ್ಮಣ ಅಲ್ಲಿಂದ ಉರುಕಿತೋಟ ಅರಮನೆಗೆ ಬಂದ. ಚೆನ್ನೆ ಆಟ ಆಡುವಂತೆ ಅಬ್ಬಗ ದಾರಗರನ್ನು ಪುಸಲಾಯಿಸಿದ. ಮಾಯದಿಂದ ಕಲ್ಲಪೆಟ್ಟಿಗೆ ಬೀಗ ತೆಗೆದ. ಚಿನ್ನದ ಚೆನ್ನೆಮಣೆ, ಬೆಳ್ಳಿಯ ಕಾಯಿಗಳನ್ನು ತೆಗೆದುಕೊಟ್ಟ. ಅಕ್ಕ ತಂಗಿ ಚೆನ್ನೆ ಆಟ ಆಡಿದರು. ಆಟದಲ್ಲಿ ಅಕ್ಕ ಸೋತಳು. ಗೆದ್ದ ತಂಗಿ ಅಕ್ಕನನ್ನು ಅಣಕಿಸಿದಳು. ಸೋತ ಅಕ್ಕ ಸಿಟ್ಟಾದಳು. ಚೆನ್ನೆಮಣೆಯಿಂದ ತಂಗಿಯ ತಲೆಗೆ ಹೊಡೆದಳು. ತಲೆ ಒಡೆಯಿತು. ನೆತ್ತರು ಹರಿಯಿತು. ತಂಗಿ ಅಲ್ಲೆ ಕುಸಿದು ಬಿದ್ದಳು. ರಕ್ತದ ಮಡುವಿನಲ್ಲಿ ಮಡಿದಳು.

ತಂಗಿ ಸತ್ತಾಗ ಅಕ್ಕ ಬೆದರಿದಳು, ಬೆವರಿದಳು ತಂಗಿಯ ಹೆಣದ ಮೇಲೆ ಬಿದ್ದು ಗೋಳಾಡಿದಳು.

''ದಾರಗ ನಿನ್ನನ್ನು ಬಿಟ್ಟು ನಾನು ಬದುಕಲಾರೆ - ನಿನ್ನೊಂದಿಗೆ ನಾನೂ ಬರುವೆ'' ಎಂದು ತಬ್ಬಿದಳು. ಓಲೆ ಬರೆದಳು. ತಂಗಿಯ ಮುಖಕ್ಕೆ ಮುತ್ತಿಟ್ಟಳು. ಹೆಣವನ್ನು ಹೊತ್ತಳು. ಬಾವಿಯ ಬಳಿ ಬಂದಳು. ಹೆಣವನ್ನು ಬಾವಿಗೆ ಹಾಕಿದಳು. ತಾನೂ ಬಾವಿಗೆ ಹಾರಿದಳು.

ಬಂದ ಬ್ರಾಹ್ಮಣ ತನ್ನ ಕೆಲಸ ಮುಗಿಸಿ ಹೊರಟ. ಸೊನ್ನೆ, ಮಾರ್ಲರು ಹಾದಿ ನಡೆದು ಮನೆಗೆ ಬರುತ್ತಿದ್ದರು. ದಾರಿಯಲ್ಲಿ ಗೋಳಿ ಕಟ್ಟೆಯ ಮೇಲೆ ಅದೇ ಬ್ರಾಹ್ಮಣ ಕುಳಿತಿದ್ದ. ಮುಖದಲ್ಲಿ ಚಿಂತೆ ತುಂಬಿತ್ತು. ಕಣ್ಣಲ್ಲಿ ಕಂಬನಿ ತುಳುಕಿತ್ತು.

ಸೊನ್ನೆ ಮಾರ್ಲರು ಬ್ರಾಹ್ಮಣನ ಬಳಿಗೆ ಬಂದರು. ಭಟ್ಟರೆ, ಏನಾಯಿತು?'' ಎಂದ
ಕೇಳಿದರು.

''ಉರುಕಿ ತೋಟ ಅರಮನೆಯಲ್ಲಿ ನಿಮ್ಮ ಅವಳಿ ಮಕ್ಕಳು ಬಾವಿಗೆ ಬಿದ್ದು ಸತ್ತರಂತೆ. ಬೊಬ್ಬೆ ಕೇಳುತ್ತಿದೆ. ಹರಕೆ ಸಂದಾಯವಾಗಲಿಲ್ಲ. ಬ್ರಹ್ಮ ಕೊಟ್ಟುದನ್ನು ಮತ್ತೆ ಸೆಳೆದುಕೊಂಡ'' ಎಂದ ಬ್ರಾಹ್ಮಣ ಮಾಯವಾದ.

ಸೊನ್ನೆ, ಮಾರ್ಲರಿಗೆ ಸತ್ಯದ ಅರಿವಾಯಿತು. ''ನೀನು ಎಚ್ಚರಿಸಿದರೂ ನಾವು ಮರೆತವು. ನಮಗೆ ಇನ್ನೇನು ಗತಿ?'' ಎಂದು ಗೋಳಾಡಿದರು. ಅಳುತ್ತ ಉರುಕಿತೋಟ ಅರಮನೆಗೆ ಓಡಿ ಬಂದರು. ಜೋಡು ಹೆಣಗಳ ಮೇಲೆ ಬಿದ್ದು ಬೊಬ್ಬೆ ಹಾಕಿದರು. ಅಪ್ಪಿ ಮುತ್ತಿಟ್ಟರು. ಮಸಣದಲ್ಲಿ ಜೋಡು ಕಾಟ ಹೂಡಿದರು. ಹೆಣಗಳನ್ನು ಅರಸಿನ ನೀರಲ್ಲಿ ಮೀಯಿಸಿದರು. ಹೊತ್ತು ನಡೆದರು. ಹೂಡಿದ ಕಾಟಗಳಲ್ಲಿಟ್ಟರು. ಬೆಂ ಇಟ್ಟೊಡನೆ ಕಾಟದಿಂದ ಬಂಗಾರದ ಜೋಡು ದುಂಬಿಗಳಾಗಿ ಹೆಣಗಳು ಹಾರಿಹೋದವು ನಾರಾಯಣ ದೇವರನ್ನು ಸೇರಿದವು. ಅಲ್ಲಿಂದ ದೇವರ ಆದೇಶದಂತೆ ಮುಜಲೊಡ್ಡಿನ ನಾಗಬ್ರಹ್ಮನ ಎಡಬಲಗಳಲ್ಲಿ ಸ್ಥಾನ ಪಡೆದರು. ನೆಲೆಯಾಗಿ ಪೂಜೆಗೊಂಡರು.

ಅಜ್ಜಿ ಕತೆ ಹೇಳಿ ಮುಗಿಸಿದಳು. ಮಕ್ಕಳು ಅಲ್ಲೇ ಕತೆ ಕೇಳುತ್ತ ನಿದ್ದೆ ಹೋಗಿದ್ದರು.

ಕನ್ನಡ ವಿಶ್ವವಿದ್ಯಾ ಪದವಿ ಮಟ್ಟದವರೆಗೆ ಉತ್ತಮ
ಹಾಗೂ ಉಪಯ ಗಿ 'ಪಠ್ಯಪುಸ್ತಕ ರಚನಾ
ವಿಭಾಗ'ವನ್ನು ಪಠ್ಯಪುಸ್ತಕ ರಚನೆ
ಮಾಡಬೇಕೆಂದು ಖೆ. ನವಸಾಕ್ಷರರಿಗಾಗಿ
ಪುಸ್ತಕ ಬರೆಸು ರುಕ್ಕೆ ವಹಿಸಿಕೊಟ್ಟರು.
ವಿಶ್ವವಿದ್ಯಾಲಯ ಪ್ರಖ್ಯಾತ ಲೇಖಕರನ್ನು,
ಭಾಷಾತಜ್ಞರನ್ನು ವರೆಲ್ಲರ ಅಭಿಪ್ರಾಯ,
ಸಲಹೆ, ಸಹಕಾ ಷೆ, ಮುದ್ರಣ ವಿನ್ಯಾಸ,
ಚಿತ್ರಗಳ ಮಹ ಅನೇಕ ಸಲ ಚರ್ಚಿಸಿ
ಯೋಜನೆಯನ

ನವಸಾಕ್ಷರರಿಗಾ ಲೇ ಪ್ರಕಟವಾಗಿರುವ
ಪುಸ್ತಕಗಳನ್ನೆಲ್ಲ ಲ್ಲ ಭಾಷಾತಜ್ಞರಿಂದ
ಪರಿಶೀಲಿಸಲಾ ಮಿಸಿಕೊಂಡು ಅವರಿಗೆ
ಕಮ್ಮಟಗಳನ್ನು ್ಯಂತ ಆಯ್ದ ಜಿಲ್ಲೆ,
ತಾಲೂಕುಗಳಿಗ ತ್ತಿರುವವರಿಂದ ಅದರ
ಗುಣದೋಷಗ ಲ್ಲ ವಿಶ್ವವಿದ್ಯಾಲಯದ
ಗಣಕಯಂತ್ರ ಸಹಾಯಕರು ನೀಡಿದ್ದ
ಮಾಹಿತಿಗಳನ್ನೆ ಗುಣವಾಗಿ ವಿಷಯದ
ಆದ್ಯತೆಗಳನ್ನು ತ ಲೇಖಕರು ನಮ್ಮ
ವಿಶ್ವವಿದ್ಯಾಲಂ ಮ ರೂಪ ಕೊಟ್ಟರು.
ಕಲಾವಿದರು ಂಡ ಹಸ್ತಪ್ರತಿಗಳನ್ನು
ನವಸಾಕ್ಷರರ ಬಳಿ ಕೊಂಡೊಯ್ದು ಅವರ ಮುಂದೆ ಪಠಿಸಿ ನಂತರ ಅವರ ಅಭಿಪ್ರಾಯ, ಪ್ರತಿಕ್ರಿಯೆಗಳನ್ನು ಅಳವಡಿಸಿ ಹಸ್ತಪ್ರತಿಯನ್ನು ಅಂತಿಮಗೊಳಿಸಲಾಯಿತು.

ನಮ್ಮ ಬಹುಸಂಖ್ಯಾತ ಸಮುದಾಯ ಅನಕ್ಷರಸ್ಥರೇ ಹೊರತು ಅವಿದ್ಯಾವಂತರಲ್ಲ. ನೃಪತುಂಗ ಹೇಳುವಂತೆ ಅವರು "ಚದುರರ್ ನಿಜದಿಂ ಕುರಿತೋದದೆಯುಂ ಕಾವ್ಯ ಪ್ರಯೋಗ ಪರಿಣತ ಮತಿಗಳ್". ಅನುಭವದಲ್ಲಿ, ವಿವೇಕದಲ್ಲಿ, ವ್ಯವಹಾರದಲ್ಲಿ, ತಿಳುವಳಿಕೆಯಲ್ಲಿ ಆ ಜನ ಚದುರರು. ಹೀಗೆಂದು ಅವರನ್ನು ಅಕ್ಷರಧಲಿತರನ್ನಾಗಿಯೂ ಉಳಿಸುವಂತಿಲ್ಲ. ಅವರಲ್ಲಿ ಅಕ್ಷರ ಕಲಿಯುವ ಸಾಮರ್ಥ್ಯವಿದೆ. ಕಲಿಸುವ ಹೊಣೆ ಸರ್ಕಾರಗಳ, ವಿಶ್ವವಿದ್ಯಾಲಯಗಳ ಮೇಲಿದೆ. ಈ ನಿಟ್ಟಿನಲ್ಲಿ ದೇಶದಾದ್ಯಂತ ಸಾಕ್ಷರತಾ ಆಂದೋಲನ ನಡೆಯುತ್ತಿದೆ. ಆದರೆ ಈ ಅಕ್ಷರ ಸಂಸ್ಕೃತಿಯ ಆಂದೋಲನದಲ್ಲಿ ಕಲಿತವರಿಗೆ ಮತ್ತು ಕಲಿಯುವವರಿಗೆ ಉತ್ತಮ ಗುಣಮಟ್ಟದ ಪುಸ್ತಕಗಳ ಅವಶ್ಯಕತೆ ಇದೆ. ಕಲಿತವರು ಮರೆಯದಂತೆ, ಕಲಿಕೆಯನ್ನು ಮುಂದುವರಿಸುವಂತೆ ನೋಡಿ ಕೊಳ್ಳುವುದು ಎಲ್ಲರ ಕರ್ತವ್ಯ.

ಕನ್ನಡ ವಿಶ್ವವಿದ್ಯಾಲಯವು ನಾಡಿನ ಹಲವು ವಿದ್ವಾಂಸರೊಂದಿಗೆ ಸೇರಿ ನಡೆಸಿದ ಒಂದು ಸಾಮೂಹಿಕ ಪ್ರಯತ್ನದ ಫಲವಾಗಿ ಈ ಪುಸ್ತಕ ರೂಪತಾಳಿದೆ. ನವಸಾಕ್ಷರರು ಈ ಪುಸ್ತಕವನ್ನು ಪ್ರೀತಿಯಿಂದ ಸ್ವೀಕರಿಸುತ್ತಾರೆಂದು ನಂಬಿದ್ದೇವೆ. ಈ ಯೋಜನೆಯ ಯಶಸ್ಸಿಗೆ ಕಾರಣರಾಗಿರುವ ಉನ್ನತ ಸಲಹಾ ಸಮಿತಿ ಹಾಗೂ ಸಂಪಾದಕ ಸಮಿತಿಯ ಸದಸ್ಯರಿಗೆ, ಲೇಖಕರಿಗೆ, ಕಲಾವಿದರಿಗೆ ಹಾಗೂ ಈ ಯೋಜನೆಯಲ್ಲಿ ಪ್ರತ್ಯಕ್ಷವಾಗಿ, ಪರೋಕ್ಷವಾಗಿ ನಮ್ಮೊಡನೆ ಪಾಲ್ಗೊಂಡವರೆಲ್ಲರಿಗೂ ನಮ್ಮ ಹೃತ್ಪೂರ್ವಕವಾದ ವಂದನೆಗಳು. ನಮ್ಮ ವಿಶ್ವವಿದ್ಯಾಲಯದ ಮೇಲೆ ವಿಶ್ವಾಸವಿಟ್ಟು ಇಂತಹ ಒಂದು ಗುರುತರವಾದ ಯೋಜನೆಯನ್ನು ವಹಿಸಿಕೊಟ್ಟ ಲೋಕಶಿಕ್ಷಣ ಇಲಾಖೆಯ ನಿರ್ದೇಶಕರಾದ ಶ್ರೀ ಲೂಕೋಸ್ ವಲ್ಲತ್ತರೈ ಅವರಿಗೆ ನನ್ನ ಕೃತಜ್ಞತೆಗಳು. ಓದುಗರು ಈ ಪುಸ್ತಕದ ಬಗ್ಗೆ ತಮ್ಮ ಅಭಿಪ್ರಾಯಗಳನ್ನು ತಿಳಿಸಿದರೆ ನಮ್ಮ ಪಠ್ಯಪುಸ್ತಕ ರಚನೆಗೆ ಉಪಯೋಗವಾಗುತ್ತದೆ.

ಚಂದ್ರಶೇಖರ ಕಂಬಾರ
ಕುಲಪತಿಗಳು